ಶ್ರೀ ಪಿ. ಎಸ್. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ ಈ ಮಿಲ್‌ನವರು ಕಾರ್ಮಿಕರಿಗೆ ಸಂಬಳವನ್ನು ಕೊಟ್ಟಿಲ್ಲ. ಅಲ್ಲಿ ಕಾರ್ಮಿಕರು ಒದ್ದಾಡುತ್ತಿದ್ದಾರೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕರ ಸಚಿವರು) : ಸದಸ್ಯರುಗಳ ಜೊತೆಗೆ ಮಾತನಾಡಿ ಅದಕ್ಕೆ ವ್ಯವಸ್ಥೆಯನ್ನು ಮಾಡುತ್ತೇವೆ.

ವಿದ್ಯುತ್ ಕಡಿತಗೊಳಿಸಿರುವುದರಿಂದ ಉದ್ಭವಿಸಿದ ಪರಿಸ್ಥಿತಿ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಉಪಾಧ್ಯಕ್ಷರೆ, ವಿದ್ಯುತ್ ಕಡಿತ ಮಾಡುತ್ತಿರುವಂತಹ ವಿಷಯ ಅತ್ಯಂತ ಅಪಾಯಕಾರಿ ಮಟ್ಟಕ್ಕೆ ಈಗ ತಲುಪಿದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ವಿದ್ಯುತ್‌ಗೆ ಸಂಬಂಧಪಟ್ಟಂತೆ ಇಬ್ಬರೂ ಮಂತ್ರಿಗಳು ಸದನದಲ್ಲಿ ಇಲ್ಲ.

ಉಪಾಧ್ಯಕ್ಷರು : ಅವರು ಪರ್ಮಿಷನ್ ತೆಗೆದುಕೊಂಡು ಬೇರೆ ಸರ್ಕಾರಿ ಕೆಲಸಕ್ಕೆ ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿ : ಇಲ್ಲಿ ಎಲ್ಲಕ್ಕೂ ಸಿದ್ದೌಷಧವಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ವಿದ್ಯುತ್ ಖೋತಾದ ಬಗ್ಗೆ ಸರ್ಕಾರ ಪ್ರಾಮಾಣಿಕವಾದ ಚಿಂತನೆಯನ್ನು ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಒಂದು ಹೇಳಿಕೆಯನ್ನು ಕೊಡುತ್ತಾರೆ, ವಿದ್ಯುತ್ ಇಲಾಖೆಯನ್ನು ಹೊಂದಿರುವಂತಹ ರಾಜ್ಯ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತಾರೆ. ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಒಂದು ರೀತಿಯ ಹೇಳಿಕೆಯನ್ನು ಕೊಡುತ್ತಾರೆ. ಇದರಿಂದ ಗೊಂದಲವೂಂಟಾಗಿದೆ, ವಿದ್ಯುತ್ ಖೋತಾ ಇದೆ ಎಂದು ಒಬ್ಬರು ಹೇಳುತ್ತಾರೆ. ವಿದ್ಯುತ್ ಖೋತಾ ಇಲ್ಲವೆಂದು ಇನ್ನೊಬ್ಬರು ಹೇಳುತ್ತಾರೆ. ವಿದ್ಯುತ್ ಖೋತಾವನ್ನು ರದ್ದು ಮಾಡಿದ್ದೇವೆಂದು ಮತ್ತೊಬ್ಬರು ಹೇಳುತ್ತಾರೆ. ಇದು ಇವರಲ್ಲೆ ಹೊಂದಾಣಿಕೆ ಇಲ್ಲದೇ ನಡೆಯುತ್ತಿರುವಂತಹ ವ್ಯವಸ್ಥೆಯಾಗಿದೆ. ಇಲ್ಲಿ ಈ ಹೇಳಿಕೆ ಏನಾದರೂ ಇರಲಿ, ವಸ್ತುಸ್ಥಿತಿ ಏನಾಗಿದೆ ಎಂದರೆ ಬೆಂಗಳೂರು ನಗರವೊಂದರಲ್ಲೇ ಬೆಳಗಿನಿಂದ ಸಂಜೆಯವರೆಗೆ 40 ಸಾರಿ ವಿದ್ಯುತ್ ನಿಲುಗಡೆಯಾಗುತ್ತಿದೆ. ಬೆಳಿಗ್ಗೆ 5 ಗಂಟೆಗೆ ಒಂದು ಸಾರಿ, 6 ಗಂಟೆಗೆ, 10 ಗಂಟೆಗೆ, ಈ ರೀತಿಯ ಅವ್ಯವಸ್ಥೆ ಏಕೆ? ಏನು ಕಾರಣವೆಂಬುದು ನನಗೆ ಅರ್ಥವಾಗುತ್ತಾ ಇಲ್ಲ. ಇದರಿಂದ ಏನಾಗಿದೆ ಎಂದರೆ ಇತ್ತೀಚಿನ ದಿವಸಗಳಲ್ಲಿ ಫ್ಯಾನ್ ಇರಬಹುದು, ಟಿ.ವಿ. ಇರಬಹುದು, ಇದೆಲ್ಲಾ ಭೋಗವಸ್ತುಗಳೇನಲ್ಲ. ಇದನ್ನು ಸಾಮಾನ್ಯ ಜನರು ಗುಡಿಸಲುಗಳಲ್ಲೂ ಉಪಯೋಗಿಸುವಂತಹ ವಸ್ತುವಾಗಿದೆ. ಆದರೆ ಎಲ್ಲಾ ರೀತಿಯಲ್ಲೂ ತೊಂದರೆಯಾಗಿದೆ. ವಿದ್ಯಾರ್ಥಿಗಳಿಗೆ, ರೋಗಿಗಳಿಗೆ, ರೈತರರಿಗೆ, ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ. ನಾನು ತಮಗೆ ಹೇಳುವುದಾದರೆ ವಿದ್ಯುತ್ ಕೊರತೆಯಿಂದ ಚಾಮರಾಜ

ನಗರದಲ್ಲಿ ಮೂರು ದಿವಸಕ್ಕೆ ಒಂದು ಸಾರಿ ನೀರನ್ನು ಕೊಡುತ್ತಿದ್ದಾರೆ. ಇಡೀ ರಾಜ್ಯಕ್ಕೆ ಇದೇ ಪರಿಸ್ಥಿತಿ ಇದೆ. ಇದನ್ನು ಸರಿಪಡಿಸುವುದಕ್ಕೆ ವಿದ್ಯುಚ್ಛಕ್ತಿ ಮಂಡಳಿ ಒಂದು ರೀತಿಯಲ್ಲಿ ದಿವಾಳಿಯಾಗಿದೆ. ಅದು ವಿದ್ಯುಚ್ಛಕ್ತಿ ಮಂಡಳಿಯಾಗಿ ಉಳಿದಿಲ್ಲ, ವಿದ್ಯುಚ್ಛಕ್ತಿ ಮಂಡಳಿಯವರು ರೈತರ ಮೇಲೆ ತೆರಿಗೆ ಹಾಕಿದರು, ಬಳಕೆದಾರರಿಗೆ ದರವನ್ನು ಜಾಸ್ತಿ ಮಾಡಿದರು. ಇವರು 900 ಕೋಟಿಯಿಂದ ಒಂದು ಸಾವಿರ ಕೋಟಿ ರೂಪಾಯಿಗಳನ್ನು ವಸೂಲು ಮಾಡುವುದಕ್ಕೆ ಹೆಚ್ಚಿನ ತೆರಿಗೆಯನ್ನು ಹಾಕಿದರೂ ಇದರಿಂದ ಜನರಿಗಾಗಲಿ, ರಾಜ್ಯಕ್ಕಾಗಲಿ, ಕೀರ್ತಿ ಬರಲಿಲ್ಲ. ಇದು ಜನರಿಗೆ ವರವಾಗುವ ಬದಲು ಶಾಪವಾಗಿದೆ. ಈ ರೀತಿ ಇರುವಾಗ ಕೆ.ಇ.ಬಿ. ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು. ಈ ವಿದ್ಯುತ್ ಖೋತಾ ಏನು ಮಾಡುತ್ತಿದ್ದೀರಿ ಇದನ್ನು ತಕ್ಷಣ ರದ್ದು ಮಾಡಬೇಕು. ಆ ಒಂದು ಭಾವನೆಯನ್ನು ಸರ್ಕಾರ ಹೊಂದದಿದ್ದರೆ ಪರಿಸ್ಥಿತಿ ಅಪಾಯಕಾರಿ ಮಟ್ಟಕ್ಕೆ ಹೋಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಈ ವಿಚಾರವಾಗಿ ಅತ್ಯಂತ ಸಾಮಾನ್ಯವಾದಂತಹ ವಿಚಾರವನ್ನು ಹೇಳುವುದಾದರೆ ಚಿತಾಗಾರಕ್ಕೂ ವಿದ್ಯುತ್ ಇಲ್ಲ. ಹೆಣವನ್ನು ಸುಡಲು ವಿದ್ಯುತ್ ಇಲ್ಲ, ಅದು ಅರ್ಧ ಸುಡುತ್ತಿದ್ದಂತೆಯೇ ವಿದ್ಯುತ್ ನಿಲುಗಡೆಯಾಗುತ್ತದೆ. ಈ ಪರಿಸ್ಥಿತಿಯಿಂದ ಸರ್ಕಾರಕ್ಕೆ ಈ ವಿದ್ಯುತ್ ಇಲಾಖೆಯಿಂದ ಕೆಟ್ಟ ಹೆಸರು ಬಂದಿದೆ ಎಂಬುದು ತಮಗೂ ಗೊತ್ತಿದೆ. ಇದು ಈ ಚುನಾವಣೆ ನಡೆದ ಮೇಲೆ ಬಂದಿರುವಂತಹ ನೇರವಾದ ತೀರ್ಪು ಆಗಿದೆ. ಈ ವಿದ್ಯುತ್ ಇಲಾಖೆಯ ಅಧ್ಯಕ್ಷತೆ, ಕೆಟ್ಟ ವ್ಯವಸ್ಥೆ, ವಿದ್ಯುತ್ ಸರಬರಾಜು ಇಲ್ಲದೇ ಇರುವಂಥಾದ್ದು. ಈ ಪರಿಸ್ಥಿತಿ ಇರುವಾಗ ರಾಜ್ಯದಲ್ಲಿ ವಿದ್ಯುತ್ ಖೋತಾವನ್ನು ತಕ್ಷಣ ರದ್ದು ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ನೇರವಾಗಿ ಒತ್ತಾಯ ಮಾಡುತ್ತಿದ್ದೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ನಾನು ಈ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಬರೆದುಕೊಟ್ಟಿದ್ದೆ. ಅದರಲ್ಲೂ ಕುಡಿಯುವ ನೀರಿನ ಬಗ್ಗೆ ವಿಶೇಷವಾಗಿ ಪ್ರಸ್ತಾಪ ಮಾಡುವುದಕ್ಕೆ ಪ್ರತ್ಯೇಕವಾಗಿ ನೋಟೀಸ್ ಕೊಟ್ಟಿದ್ದೇನೆ. ಇದನ್ನು ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಇಡೀ ಕರ್ನಾಟಕ ರಾಜ್ಯದಲ್ಲಿ ಯಾರ ರೀತಿಯ ಪರಿಸ್ಥಿತಿ ಇದೆ ಎಂಬುದನ್ನು ವಿವರಿಸಿ ಹೇಳಲು ಸೋಮವಾರ ತಾವು ಕಾಲಾವಕಾಶವನ್ನು ಕೊಟ್ಟರೆ ನಾನು ಹೇಳುತ್ತೇನೆ. ಆದರೆ ಇವತ್ತು ಏನಾಗಿದೆ ಎಂದರೆ ಒಂದು ದಿವಸದಲ್ಲಿ ಸುಮಾರು 4-5 ತಾಸುಗಳು ವಿದ್ಯುತ್ ಕಡಿತಗೊಳಿಸುವಂಥಾದ್ದು ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಈಗ ಪಿ.ಯು.ಸಿ. ಪರೀಕ್ಷೆಗಳು ನಡೆಯುತ್ತಿವೆ. ಮತ್ತು ಅನೇಕ ಕಾಂಪಿಟೇಟೀವ್ ಎಗ್ಸಾಮಿನೇಷನ್‌ಗೆ ವಿದ್ಯಾರ್ಥಿಗಳು ಕೂರುತ್ತಿದ್ದಾರೆ. ಎಸ್.ಎಸ್.ಎಲ್.ಸಿ. ಪರೀಕ್ಷೆ ಕೂಡ ಇದೆ. ಇವೆಲ್ಲಾ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಅಪಿಯರ್ ಆಗುವಾಗ ನೀವು ತಾಸುಗಟ್ಟಲೆ ಕರೆಂಟ್ ನಿಲ್ಲಿಸಿದರೆ ಅವರು ಓದುವುದು ಹೇಗೆ? ಏನು ಎಲ್ಲರ ಮನೆಯಲ್ಲಿ ಗ್ಯಾಸ್ ಇಟ್ಟಿರುತ್ತಾರೆಯೇ ಅಥವಾ ಎಲ್ಲರ ಮನೆಯಲ್ಲಿ ಅಲ್ಟರ್ನೇಟೀವ್ ಅರೇಂಜ್‌ಮೆಂಟ್ ಮಾಡಿಕೊಳ್ಳುತ್ತಾರೋ? ಬಡವರು, ಕೆಳ ಮಧ್ಯಮ ವರ್ಗದ ಜನರ ಮನೆಯಲ್ಲಿ ಅಲ್ಟರ್ನೇಟೀವ್ ವ್ಯವಸ್ಥೆ ಇರುವುದಿಲ್ಲ. ಕರೆಂಟ್ ಮೇಲೆ ಡಿಪೆಂಡ್ ಆಗಿರತಕ್ಕಂಥ ಜನ ಇರುತ್ತಾರೆ. ಈಗಾಗಲೇ ವಾಟಾಳ್ ನಾಗರಾಜ್ ಹೇಳಿದ ಹಾಗೆ ಮುಖ್ಯಮಂತ್ರಿಯವರು ಒಂದು ಹೇಳಿಕೆ ನೀಡುವುದು, ಪವರ್ ಮಿನಿಸ್ಟರ್ ಒಂದು ಸ್ಟೇಟ್‌ಮೆಂಟ್ ಕೊಡುವುದು, ಚೇರ್‌ಮನ್

ಒಂದು ಹೇಳುವುದು ಆಗುತ್ತಿದೆ. ನೀವು 1,500 ಕೋಟಿ ರೂಪಾಯಿ ಹೊಸ ತೆರಿಗೆ ಹಾಕಿಕೊಂಡಿರಿ. ನಾವು ಪ್ರೊಟೆಸ್ಟ್ ಮಾಡಿದೆವು, ಧರಣಿ ಮಾಡಿದೆವು, ಏನು ಕೇಳಲೇ ಇಲ್ಲ. ಆ ಕಡೆ ಗಮನವೇ ಇಲ್ಲ. ನೀವು ತಯಾರಿ ಮಾಡಿಕೊಂಡಿದ್ದೀರಿ, ಏನೆಂದರೆ ನೀವೇನು ಮಾಡಿದರೂ ನಾವು ಮಾಡೋದೇ ಮಾಡುವುದು ನೀವು ಹೇಳುವುದು ಹೇಳಿ, ನಾವು ಮಾಡುವುದೇ ಮಾಡುವುದು ಎಂದು. ಮಾನ್ಯ ಕೆ.ಹೆಚ್. ಪಾಟೀಲರು ಒಂದು ಕತೆ ಹೇಳುತ್ತಿದ್ದರು. ನೀವು ಬೇಡ ಎಂದರೂ ಹೋಗುತ್ತೇನೆ, ಹೋಗು ಎಂದರೂ ಹೋಗುತ್ತೇನೆ, ಏನು ಹೇಳುತ್ತೀರಿ ಹೇಳಿ ಎಂದ ಹಾಗೆ. ಅದಕ್ಕೆ ಅವರ ರೀತಿಯಲ್ಲಿ ಬಂದಿದ್ದೀರಿ. ನೀವು ಹೇಳಿದರೂ ನಾವು ಮಾಡುವುದು ಹೀಗೆ, ಹೇಳದೆ ಇದ್ದರೂ ಮಾಡುವುದೇ ಹೀಗೆ ಎಂದು ತೀರ್ಮಾನಕ್ಕೆ ಬಂದಿದ್ದೀರಿ. ನೀವು ಮಾಡುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆಯಾಗಿದೆ. ಇನ್ನು ಕುಡಿಯುವ ನೀರಿನ ಬಗ್ಗೆ ತಮಗೆ ಗೊತ್ತಿದೆ. ಅದರ ಬಗ್ಗೆ ಮುಂದೆ ಪ್ರಸ್ತಾಪ ಮಾಡಿದಾಗ ಹೇಳುತ್ತೇನೆ. ಆದರೆ ಸಧ್ಯಕ್ಕೆ ಅನೇಕ ಕಡೆ ಈ ವಿದ್ಯುತ್ ಕೊರತೆಯಿಂದ ಇವತ್ತಿನ ದಿವಸ ಬೆಳೆ ಹಾನಿ. ಅದು ದೊಡ್ಡ ಕತೆ ಇದೆ. ಆದರೆ ಸರ್ವೇಸಾಮಾನ್ಯವಾಗಿ ಸಿಟಿಗಳಲ್ಲಿ ಕೂಡ ಇವತ್ತಿನ ದಿವಸ ಕುಡಿಯುವ ನೀರಿಗೆ ತೊಂದರೆ, ವಿದ್ಯಾರ್ಥಿಗಳಿಗೆ ತೊಂದರೆ, ಸಣ್ಣಪುಟ್ಟ ಕಾರ್ಖಾನೆಗಳಿಗೆ ತೊಂದರೆ ಮತ್ತು ಮನೆಯಲ್ಲಿ ಇವತ್ತು ದಿನಬೆಳಿಗ್ಗೆ ಮಾಡತಕ್ಕಂಥ ಎ.ಇ.ಹೆಚ್ ಇಟ್ಟುಕೊಂಡಿರುವವರಿಗಂತೂ ತೊಂದರೆ ಹೇಳಬಾರದು. ಅನೇಕ ಜನ ಇವತ್ತು ಅಡಿಗೆಯನ್ನು ಕರೆಂಟ್ ಸ್ಟೌವ್ ಮೇಲೆ ಮಾಡಿಕೊಳ್ಳುವವರು ಇದ್ದಾರೆ. ಆದುದರಿಂದ ಇದರ ಬಗ್ಗೆ ಒಂದು ಸ್ಪಷ್ಟವಾದಂತಹ ನಿಲುವು ತೆಗೆದುಕೊಂಡು ತಾವು ರಿಲೀಫ್ ಕೊಡದೇ ಹೋದರೆ ಖಂಡಿತವಾಗಿ ಜನರಿಗೆ ನೀವಾಗಿ ತೊಂದರೆ ಮಾಡಿದ ಹಾಗೆ ಆಗುತ್ತದೆ. ಮತ್ತು ಈಗಾಗಲೇ ನಮ್ಮ ಬೆಂಗಳೂರು ಸಿಟಿ ಬಗ್ಗೆ ಜನರ ಅಭಿಪ್ರಾಯ ಬದಲಾವಣೆಯಾಗುತ್ತಿದೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಕನಿಷ್ಟ ಪಕ್ಷ ಈ ಸಾಮಾನ್ಯ ಜನರಿಗೆ ಅನುಕೂಲ ಮಾಡಿಕೊಡತಕ್ಕಂಥ ಪ್ರಯತ್ನ ತಾವು ಏನು ಮಾಡುತ್ತೀರಿ ಮತ್ತು ಇದರ ಜೊತೆಗೆ ಸಣ್ಣಪುಟ್ಟ ಗ್ರಿವೆನ್ಸ್ಸ್ ಏನಿದೆ ಇದನ್ನು ನಿವಾರಣೆ ಮಾಡುವುದಕ್ಕೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಸ್ಪಷ್ಟವಾದಂತಹ ನಿಲವು ಹೇಳಬೇಕು.

+ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರುಗಳು ಮುಖ್ಯವಾಗಿ ಬೇರೆ ವಿಷಯಗಳನ್ನೆಲ್ಲಾ ಹೇಳಿದ್ದಾರೆ. ವಿದ್ಯುಚ್ಛಕ್ತಿ ಕಡಿತದಿಂದಾಗಿ ಈ ವ್ಯವಸಾಯ ರಂಗದ ಮೇಲೆ ತೀವ್ರವಾದಂತಹ ಪರಿಮಾಣಾವಾಗಿದೆ. ನೀರಾವರಿ ಮೇಲೆ ನಿಂತಿರತಕ್ಕ, ವಿದ್ಯುಚ್ಛಕ್ತಿ ಮೇಲೆ ನಿಂತಿರತಕ್ಕ ವ್ಯವಸಾಯಗಾರರು ಸಂಪೂರ್ಣವಾಗಿ ಬೆಳೆ ನಾಶವಾಗಿರತಕ್ಕಂಥ ಪರಿಸ್ಥಿತಿ ಇದೆ. ಕೆಲವು ಬೆಳೆಗಳಿಗೆ ಪ್ರತಿ ದಿವಸ ನೀರು ಹಾಯಿಸಬೇಕು. ಪ್ರತಿ ದಿವಸ ನೀರು ಹಾಯಿಸದೇ ಹೋದರೆ ಬೆಳೆ ನಾಶವಾಗುತ್ತದೆ. 2-3 ದಿವಸ ನಿರಂತರವಾಗಿ ವಿದ್ಯುಚ್ಛಕ್ತಿ ಇರುವುದಿಲ್ಲ. ನಾವು ಪ್ರಾರಂಭದಲ್ಲಿ ಹೇಳುವುದು ಕೊನೇಪಕ್ಷ ಈ ಪಟ್ಟಣ ಪ್ರದೇಶದಲ್ಲಿ ಕೆಲವು ಸಮಯ ವಿದ್ಯುಚ್ಛಕ್ತಿಯನ್ನು ಕಡಿತ ಮಾಡಿ ರೂರಲ್ ಏರಿಯಾಗೆ ಕೊಡಿ. ಕುಡಿಯುವ ನೀರಿನ ಸಮಸ್ಯೆ ಹಳ್ಳಿಗಾಡಿನಲ್ಲಿ ಇದೆ. 2-3 ದಿವಸ ಕರೆಂಟ್ ಇಲ್ಲದೆ ಕುಡಿಯುವುದಕ್ಕೆ ನೀರು ಸಿಗುತ್ತಾ ಇಲ್ಲ. ನಮಗೆ ಆಶ್ಚರ್ಯ ಆಗುತ್ತಿರುವುದು ಕೆ.ಇ.ಬಿ ಸರ್ಕಾರದ ಅಧೀನದಲ್ಲಿ ಇದೆಯಾ ಅಥವಾ ಸರ್ಕಾರ ಕೆ.ಇ.ಬಿ. ಅಧೀನದಲ್ಲಿ ಇದೆಯೋ ಎಂಬುದು ಅರ್ಥವಾಗುತ್ತಿಲ್ಲ.

ಏಕೆಂದರೆ ಅಧ್ಯಕ್ಷರು, ಮಂತ್ರಿಗಳು ಒಬ್ಬೊಬ್ಬರು ಏನೇನು ಹೇಳುತ್ತಾರೆ ಎಂಬುದು ಗೊತ್ತಾಗುವುದಿಲ್ಲ. ಕೊನೆಗೆ ಗೊತ್ತಾಗುವುದು ಏನೆಂದರೆ ವಿದ್ಯುಚ್ಛಕ್ತಿ ಮಂಡಲಿ ಅಧೀನದಲ್ಲಿ ಸರ್ಕಾರ ಇದೆಯೋ ಎಂದು ಗುಮಾನಿ. ನಾನು ಹಿಂದೆ ಒಂದು ಬಾರಿ ಮಾತನಾಡುತ್ತಾ ಹೇಳಿದ್ದೆ. ಕಳೆದ ಚುನಾವಣೆಯಲ್ಲಿ ನೀವು ಸೋಲುವುದಕ್ಕೆ ಹಿಂದೆ ಕೆಲವು ವಿದ್ಯುಚ್ಛಕ್ತಿ ಮಂಡಲಿ ಅಧ್ಯಕ್ಷರಾಗಿದ್ದಂತಹ 3-4 ಅಧಿಕಾರಿಗಳನ್ನು ಇಟ್ಟುಕೊಂಡು ಬಿಟ್ಟರೆ ಯಾರೂ ನಿಮ್ಮನ್ನು ಸೋಲಿಸಬೇಕಾಗಿಲ್ಲ, ಅವರೇ ನಿಮ್ಮನ್ನು ಸೋಲಿಸಿಬಿಡುತ್ತಾರೆ. ಇಷ್ಟು ಗಂಭೀರವಾದಂತಹ ಪರಿಸ್ಥಿತಿ ಇದೆ. ಒಂದು ಕಡೆ ವ್ಯವಸಾಯ ರಂಗದ ಮೇಲೆ ಹೊಡೆತ, ಕುಡಿಯುವ ನೀರಿನ ಸಮಸ್ಯೆ, ಇನ್ನೊಂದು ಕಡೆ ಪಟ್ಟಣದಲ್ಲಿ ಸಾಮಾನ್ಯ ಜನರು ಜೀವನ ಮಾಡುವುದಕ್ಕೆ ಸಮಸ್ಯೆ ಇರುವಂತಹ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಸಮಸ್ಯೆ. ನಿಜ, ನಮಗೂ ಗೊತ್ತಿದೆ. ಉತ್ಪಾದನೆಯಲ್ಲಿ, ಡಿಸ್ಟ್ರಿಬ್ಯೂಷನ್‌ನಲ್ಲಿ ಸಮಸ್ಯೆಯಾಗಿದೆ. ಇದು ಹಲವಾರು ವರ್ಷಗಳಿಂದ ಬಂದಿರತಕ್ಕಂಥ ಸಮಸ್ಯೆ. ಈ ಸಮಸ್ಯೆ ಇದ್ದರೂ ಇರತಕ್ಕಂಥ ವಿದ್ಯುಚ್ಛಕ್ತಿಯನ್ನು ಒಂದು ಯೋಜಿತವಾಗಿ, ವೈಜ್ಞಾನಿಕವಾಗಿ ಎಷ್ಟು ಎಷ್ಟು ವಿದ್ಯುಚ್ಛಕ್ತಿ ಇದೆಯೋ ಅಷ್ಟನ್ನು ಯಾವ್ಯಾವ ರಂಗಕ್ಕೆ, ಯಾವ್ಯಾವ ಕಾಲಕ್ಕೆ, ಯಾವ ಸಂದರ್ಭದಲ್ಲಿ ಬಿಡಬೇಕೆಂದು ಹೇಳತಕ್ಕಂಥ ಒಂದು ಯೋಜನೆ ಇಲ್ಲ. ನಾವು ನಿಮಗೆ 24 ಗಂಟೆ ವ್ಯವಸಾಯವು ರಂಗಕ್ಕೆ ವಿದ್ಯುಚ್ಛಕ್ತಿ ಕೊಡುವುದಕ್ಕೆ ಪರಿಸ್ಥಿತಿ ಇಲ್ಲದೆ ಇದ್ದರೂ ಕೂಡ ಕನಿಷ್ಟ 10 ಗಂಟೆಯಾದರೂ ವೊಲ್ಟೇಜ್ ಇರುವಂತಹ ಕರೆಂಟ್ ಕೊಡಿ. ವೊಲ್ಟೇಜ್ ಇರುವುದಿಲ್ಲ, ಕರೆಂಟ್ ಇರುವುದಿಲ್ಲ. ಈ ರೀತಿಯ ಪರಿಸ್ಥಿತಿಯಾಗಿದೆ. ಸರ್ಕಾರ ಸುಮಾರು 2-3 ತಿಂಗಳ ಹಿಂದೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ತೆಗೆದುಕೊಳ್ಳಲಿಲ್ಲ. ಈಗಲಾದರೂ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲವೆಂದು ಹೇಳಿದರು. ಅವರು ಇಲ್ಲದೇ ಇರುವುದು ಒಂದು ರೀತಿಯಲ್ಲಿ ಒಳ್ಳೆಯದು. ಏಕೆಂದರೆ ವೇದಾಂತದ ಭಾಷಣ ಸಿಗುತ್ತಿತ್ತು. ನಮ್ಮ ಹತ್ತಿರ10 ಲೀಟರ್ ನೀರು ಇರುವುದು, ಅದನ್ನು ಇಡೀ ರಾಜ್ಯಕ್ಕೆ ಹೇಗೆ ಹಂಚುವುದು, ಈ ರೀತಿಯ ಒಂದು ವೇದಾಂತದ ಭಾಷಣ ಸಿಗುತ್ತಿತ್ತು. ಕೆ.ಇ.ಬಿ.ಯನ್ನು ಕ.ವಿ.ಮಂ ಎಂದು ಹೇಳುತ್ತಾರೆ. ಎಂದರೆ ಕತ್ತಲನ್ನು ವಿತರಿಸುವ ಮಂಡಲಿ ಆಗಿಬಿಟ್ಟಿದೆ. ಇವತ್ತು ಯಾವುದಕ್ಕೆ ಕೊರತೆ ಎಂದರೆ ಜನರೇಷನ್, ಡಿಸ್ಟ್ರಿಬ್ಯೂಷನ್ ಜೊತೆಗೆ ಬಹಳ ಕೊರತೆ ಇರುವುದು ಎಫಿಷಯೆನ್ಸಿ. ಕಳೆದ 3 ವರ್ಷದಿಂದ ನೋಡುತ್ತಿದ್ದೇವೆ, ನೀವು ಯಾವಾಗ ಕರೆಂಟ್ ತೆಗೆಯುತ್ತೀರಿ, ಯಾವಾಗ ಕರೆಂಟ್ ಕೊಡುತ್ತೀರಿ ಎನ್ನುವುದನ್ನು ಕೈ ಮುಗಿದು ಕೇಳುತ್ತೇನೆ ಹೇಳಿ. ನೀವು ಪೇಪರ್‌ನಲ್ಲಿ ಅನೌನ್ಸ್ ಮಾಡಿ, ಇಂತಹ ಟೈಂ ನಲ್ಲಿ ನಾವು ಕರೆಂಟ್ ಕೊಡುತ್ತೇವೆ ಎಂದು. ಖಂಡಿತ ಕಡಿತ ಮಾಡುವುದಿಲ್ಲವೆಂದರೆ ಜನ ಕೃತಾರ್ಥರಾಗುತ್ತಾರೆ. ವಿದ್ಯಾರ್ಥಿಗಳಿಗೆ ಯಾವಾಗ ಕರೆಂಟ್ ಇರುತ್ತದೆ ಎನ್ನುವುದು ಗೊತ್ತಿಲ್ಲ. ಅಂಗಡಿ ಮುಂಗಟ್ಟು ಇಟ್ಟುಕೊಂಡವರಿಗೆ ಮತ್ತು ಸಣ್ಣ ಉದ್ದಿಮೆದಾರರಿಗೆ ಗೊತ್ತಿಲ್ಲ. ಇದರಿಂದ ಲಾಭ ಯಾರಿಗೆಂದರೆ ಜನರೇಟರ್ ಮಾರುವವರಿಗೆ ಲಾಭ. ಸರಗಳ್ಳರಿಗೆ ಲಾಭ. ನಾನು ಅದಕ್ಕೋಸ್ಕರ ತಮ್ಮಲ್ಲಿ ಕೇಳುವುದೇನೆಂದರೆ ದಯವಿಟ್ಟು ಬೆಳಿಗ್ಗೆ ಮತ್ತು ಸಂಜೆ ಈ ಕರೆಂಟ್ ಶೆಡ್‌ಡೌನ್ ಮಾಡಬೇಡಿ.

ಸಂಜೆ ಕರೆಂಟ್ ಬೇಕಾಗಿದೆ. ಅದನ್ನು ಬಿಟ್ಟರೆ ಜೀವನ ಇಲ್ಲ. ದಯವಿಟ್ಟು ಸರ್ಕಾರದಿಂದ ಕೆ.ಇ.ಬಿ.ಗೆ ಒಂದು ಆದೇಶ ಹೋಗಬೇಕು. ಯಾವುದೇ ಸಬೂಬು ಕೊಡದೆ ನಿರ್ದಿಷ್ಟ ಅವಧಿಯಲ್ಲಿ ಯಾವ ಜನರಿಗೆ ಅಗತ್ಯ ಇದೆ ಅವರಿಗೆ ಕರೆಂಟ್ ಕೊಡುತ್ತೇವೆಂದು ಆದೇಶ ಹೋಗಬೇಕು. ಒಂದು ಸಲ ನೀವು ಆದೇಶ ಕೊಟ್ಟರೂ ಸಹ ಅನೇಕ ಸಣ್ಣ ಉದ್ದಿಮೆದಾರರು ಹೇಳುತ್ತಾರೆ, 7 ರಿಂದ 8 ಗಂಟೆಯವರೆಗೆ ಕರೆಂಟ್ ತೆಗೆಯುತ್ತೇವೆಂದು ಹೇಳಿದ್ದರು, 9 ಗಂಟೆಗೆ ಕಾರ್ಮಿಕರಿಗೆ ಬರುವುದಕ್ಕೆ ಹೇಳಿದ್ದೇನೆ. ಆದರೆ ಈಗ 9 ಗಂಟೆಗೆ ಕರೆಂಟ್ ತೆಗೆದಿದ್ದಾರೆ ಎಂದು. ಏಕೆಂದರೆ ಅವರು ಯಾರಿಗೋ ಪ್ರಾಮಿಸ್ ಮಾಡಿರುತ್ತಾರೆ. ನನ್ನ ಮಾಲನ್ನು ಕೊಡುತ್ತೇನೆಂದು. ಅವರು ಅವರ ಹತ್ತಿರ ಕೂಡ ಭದ್ರವಾಗಬೇಕು. ಅದಕ್ಕೋಸ್ಕರ ಯಾವುದೇ ಸಬೂಬು ಹೇಳದೆ ಕೂಡಲೇ ಪರೀಕ್ಷೆ ಸಮಯ ಇರುವುದರಿಂದ ಮತ್ತು ಜನಸಾಮಾನ್ಯರಿಗೆ ಅಗತ್ಯ ಇರುವುದರಿಂದ ಕಡಿತವನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಮಾಡಿ. ಜನರಿಗೆ ಮತ್ತು ವಿದ್ಯಾರ್ಥಿಗಳಿಗೆ ಹತ್ತಿರದವರು ಎಂದು ತೋರಿಸಿಕೊಡುವುದಕ್ಕೆ ಕರೆಂಟ್ ಕೊಡಿ.

+ ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪಾಧ್ಯಕ್ಷರೇ, ವಿಶೇಷವಾಗಿ ವಿದ್ಯುಚ್ಛಕ್ತಿಗೋಸ್ಕರ ಒಂದು ಸದನ ಸಮಿತಿಯನ್ನು ತಾವೇ ಮಾಡಿದಿರಿ. ಅದಕ್ಕೆ ಶಿವಕುಮಾರ್ ಅಧ್ಯಕ್ಷರಾಗಿದ್ದರು. ಅದರಲ್ಲಿ ಬಹಳ ಅಮೂಲ್ಯವಾದ ಸಲಹೆಗಳನ್ನು ಕೊಡುವುದರ ಮೂಲಕ ಯಾವ ರೀತಿ ವಿದ್ಯುಚ್ಛಕ್ತಿ ವಿತರಣೆ ವ್ಯವಸ್ಥೆಯಲ್ಲಿ ಸರ್ಕಾರ ಯಾವ್ಯಾವ ಕಾರ್ಯಕ್ರಮ ಹಾಕಬೇಕೆಂದು ಸಲಹೆ ಮಾಡಿದ್ದಾರೆ. ಅದೇನು ಸದನ ಸಮಿತಿ, ಅದಕ್ಕೆ ಏನಾದರೂ ಕಿಮ್ಮತ್ತು ಇದೆಯೇ? ಇದರಿಂದ ಮೂಲಭೂತ ಬದಲಾವಣೆಗಳು ಏನಾದರೂ ಆಗಿದೆಯಾ? ದಯವಿಟ್ಟು ಹೇಳಬೇಕು. ವಿದ್ಯುಚ್ಛಕ್ತಿ ಮಂಡಲಿಯವರು ಕೊಟ್ಟಿರತಕ್ಕಂಥ ಕಾಲಾವಧಿಯಲ್ಲಿ ಕನಿಷ್ಠ ವಿದ್ಯುಚ್ಛಕ್ತಿ ಕೊಟ್ಟರೆ ಬೆಳೆ ಉಳಿಸಿಕೊಳ್ಳುವುದಕ್ಕೆ ಸಾಧ್ಯ. ಬಹಳ ಚೆನ್ನಾಗಿ ಇರುವಾಗ 60 ಟನ್ ಕಬ್ಬು ಬೆಳೆಯುತ್ತಿದ್ದೆವು. ಈಗ 15 ಟನ್‌ಗೆ ಬಂದಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು, ವಿದ್ಯುತ್ ಅಭಾವವನ್ನು ಎದುರಿಸುತ್ತಿರತಕ್ಕಂಥ ರಾಜ್ಯದ ಸರ್ಕಾರ ನಮ್ಮ ಜೊತೆಯಲ್ಲಿ ಮಾತುಕತೆ ಆಡಿದರೆ ಹೊರರಾಜ್ಯದಿಂದ ವಿದ್ಯುಚ್ಛಕ್ತಿ ಸರಬರಾಜು ಮಾಡತಕ್ಕಂಥ ವಿಷಯಕ್ಕೆ ಅವರಿಗೆ ನಾನು ಸಹಕಾರ ಕೊಡುತ್ತೇನೆ ಎನ್ನುವಂತಹ ವಿಷಯವನ್ನು ಪೇಪರ್‌ನಲ್ಲಿ ಹೇಳಿದ್ದಾರೆ.

2.10 ಪಿ.ಎಂ.

ಆದ್ದರಿಂದ ಇದರ ಬಗ್ಗೆ ತಾವು ತ್ವರಿತವಾಗಿ ತೀರ್ಮಾನ ತೆಗೆದುಕೊಳ್ಳಬೇಕು. ರೈತರಿಗೂ ಗೊತ್ತಿಲ್ಲ, ಸಾರ್ವಜನಿಕರೂ ಗೊತ್ತಿಲ್ಲ, ಡೆಪಾಸಿಟ್ ವಸೂಲು ಮಾಡುತ್ತಾರೆ. ಡೆಪಾಸಿಟ್ ಯಾವ ರೀತಿ ವಸೂಲು ಮಾಡುತ್ತಾರೆ. ಏತಕ್ಕೋಸ್ಕರ ವಸೂಲು ಮಾಡುತ್ತಾರೆ ಎಂದು ಗೊತ್ತಿಲ್ಲ. ಕೆ ಇ ಬಿ ಬೋರ್ಡ್ ಬೇರೆ. ಆ ಬೋರ್ಡಿನಲ್ಲಿ ಏನು ತೀರ್ಮಾನವಾಗಿರುತ್ತದೆ ಎನ್ನುವುದು ಮಂತ್ರಿಗಳಿಗೂ ಗೊತ್ತಿರುವುದಿಲ್ಲ. ಆ ಬೋರ್ಡಿನವರೇ ಒಂದು ರೀತಿ ಮಾಡುತ್ತಾರೆ. ಆ ರೀತಿ ಡೆಪಾಸಿಟ್ ವಸೂಲು ಮಾಡಿ ಈಗಾಗಲೇ 900-1000 ಕೋಟಿ ಹೆಚ್ಚು ತೆರಿಗೆ ಹಾಕಿದ್ದರೂ ಯಾವುದೇ ಮೈನ್‌ಟೆನ್ಸ್ ಇಲ್ಲವೆಂದರೆ, ದಯವಿಟ್ಟು ಸರ್ಕಾರ ಆ ಕಡತವನ್ನು ನೋಡಬೇಕು. ಪಟ್ಟಣಕ್ಕೆ ಒಂದು ತರಹ ವಿದ್ಯುಚ್ಛಕ್ತಿ ನೀಡುವುದು, ಹಳ್ಳಿಗಳಿಗೆ

ಒಂದು ತರಹ ವಿದ್ಯುಚ್ಛಕ್ತಿ ನೀಡುವುದು ಮಾಡುತ್ತಿದ್ದಾರೆ. ಏಕೆ ಈ ತಾರತಮ್ಯ? ಹಳ್ಳಿಯವರೇನು ಫುಟ್‌ಪಾತ್‌ನಲ್ಲಿ ಹುಟ್ಟಿದ್ದಾರೆಯೇ? ತಾವು ಏಕೆ ಸಮಾನವಾದ ವಿದ್ಯುಚ್ಛಕ್ತಿ ನೀಡಿಕೆ ವ್ಯವಸ್ಥೆಯನ್ನು ಮಾಡಬಾರದು? ಆದ್ದರಿಂದ ದಯವಿಟ್ಟು ಈ ತಾರತಮ್ಯವನ್ನು ತೆಗೆದು ಹಾಕಬೇಕು, ರೈತರಿಗೆ ಹೆಚ್ಚು ಒತ್ತು ಕೊಡತಕ್ಕಂಥ ಚಿಂತನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಸರ್ಕಾರ ಇದರ ಬಗ್ಗೆ ಅತ್ಯಂತ ಜವಾಬ್ದಾರಿಯುತವಾಗಿ ತೀರ್ಮಾನ ತೆಗೆದುಕೊಳ್ಳಬೇಕು.

+ ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಿತ್ರರಾದ ಖಗೇರ್ಯವರು, ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು, ಸುರೇಶ್ ಕುಮಾರ್‌ರವರು ಮತ್ತು ಪುಟ್ಟಣ್ಣಯ್ಯನವರು ವಿದ್ಯುಚ್ಛಕ್ತಿ ಕೊರತೆಯ ಬಗ್ಗೆ ಮತ್ತು ಈಗ ನಾವು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅಧಿಕೃತವಾಗಿ ವಿದ್ಯುಚ್ಛಕ್ತಿಯನ್ನು ಲೋಡ್ ಶೆಡ್ಡಿಂಗ್ ಮಾಡುತ್ತಿರತಕ್ಕಂಥಾದ್ದರ ಬಗ್ಗೆ ಹೇಳಿದ್ದಾರೆ. ಮೊದಲು ನಮ್ಮ ಹತ್ತಿರ ಎಷ್ಟು ವಿದ್ಯುಚ್ಛಕ್ತಿ ಇದೆ ಎನ್ನುವುದನ್ನು ಗಮನಿಸಬೇಕು. ಎಷ್ಟು ವಿದ್ಯುಚ್ಛಕ್ತಿ ಇದೆ ಅದಕ್ಕನುಗುಣವಾಗಿ ನಾವು ಅದನ್ನು ವಿತರಣೆ ಮಾಡಬೇಕು. ಇಲ್ಲದಿರುವ ವಿದ್ಯುಚ್ಛಕ್ತಿಯನ್ನು ವಿತರಣೆ ಮಾಡಬೇಕು ಎಂದರೆ ಎಲ್ಲಿಂದ ಮಾಡುವುದು? ಇದನ್ನು ಮುಖ್ಯಮಂತ್ರಿಗಳೂ ಕೂಡ ಈ ಸದನದಲ್ಲಿ ಹಲವು ಬಾರಿ ಹೇಳಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದಲ್ಲಿ ನಾವು ಒಂದು ದಿವಸಕ್ಕೆ 68 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿಯನ್ನು ವಿತರಣೆ ಮಾಡುತ್ತಿದ್ದೇವೆ. ನಮ್ಮಲ್ಲಿ ಅದಕ್ಕಿಂತ ಜಾಸ್ತಿ ವಿದ್ಯುಚ್ಛಕ್ತಿ ಇಲ್ಲ. ಈ ಮಟ್ಟವನ್ನು ನಾವು ಕಾಯ್ದುಕೊಂಡು ಬಂದಿದ್ದೇವೆ. ಕಳೆದ ವರ್ಷ ಇದೇ ಸಂದರ್ಭದಲ್ಲಿ ಅಂದರೆ ಏಪ್ರಿಲ್ ತಿಂಗಳಿನಲ್ಲಿ ಸುಮಾರು 59-62 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿ ಮಾತ್ರ ಇತ್ತು. ಈ ವರ್ಷ 6 ಮಿಲಿಯನ್ ಯೂನಿಟ್ ಜಾಸ್ತಿಯಾಗಿದೆ. ಇದಕ್ಕೆ ಬೇಕಾದಷ್ಟು ಕಾರಣಗಳಿವೆ. ಕಳೆದ ವರ್ಷ ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ರಾಜ್ಯದ ಕೆಲವು ಭಾಗಗಳಲ್ಲಿ ವ್ಯಾಪಕವಾಗಿ ಮಳೆ ಬಿದ್ದಿತ್ತು. ಆದರೆ ಈ ಸಂದರ್ಭದಲ್ಲಿ ಇಲ್ಲ. ಮಳೆ ಬೀಳುವಂಥ ಪ್ರದೇಶಗಳಲ್ಲಿ ಇವತ್ತು ಮಳೆ ಬೀಳದೇ ಇರುವುದರಿಂದ ವಿದ್ಯುಚ್ಛಕ್ತಿ ಮೇಲೆ ಒತ್ತಡ ಜಾಸ್ತಿಯಾಗಿ ಕೆಲವು ಸಂದರ್ಭದಲ್ಲಿ 73 ಮಿಲಿಯನ್ ಯೂನಿಟ್‌ವರೆಗೆ ಹೋಗುತ್ತಿರತಕ್ಕಂಥ ಪರಿಸ್ಥಿತಿ ಬಂದಿದೆ. 73 ಮಿಲಿಯನ್ ಯೂನಿಟನ್ನು ಮಾಡಬೇಕಾದರೆ ನಮಗಿರತಕ್ಕಂಥ ಒಂದೇ ಒಂದು ಸೋರ್ಸ್ ಎಂದರೆ ಶರಾವತಿಯ ಹೈಡಲ್ ಯೂನಿಟ್‌ಈಗ ಶರಾವತಿಯಲ್ಲಿ ನೀರಿದೆ. ಆದರೆ ನಾವು ಮುಂದಿನ ಜೂನ್‌ವರೆಗೆ ಅಂದರೆ ಮಳೆಗಾಲದವರೆಗೆ ನೀರನ್ನು ಇಟ್ಟುಕೊಳ್ಳಬೇಕು. ಆದ್ದರಿಂದ ನಾವು ಮುಂದಿನ ಜೂನ್‌ವರೆಗೆ ಬೇಕಾದಂಥ ನೀರಿನ ಮಟ್ಟವನ್ನು ಕಾಯ್ದುಕೊಂಡು ಒಂದು ದಿವಸಕ್ಕೆ 21 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿದ್ದೇವೆ. ಇನ್ನು 3-4 ತಿಂಗಳವರೆಗೆ ಸಂಪೂರ್ಣವಾಗಿ ವಿದ್ಯುಚ್ಛಕ್ತಿಯನ್ನು ಕೊಡಬಹುದು. ಆದರೆ ಅಲ್ಲಿರತಕ್ಕಂಥ ನೀರು ಮುಗಿದಾದ ಮೇಲೆ ಮುಂದಿನ ತಿಂಗಳುಗಳಲ್ಲಿ ಏನು ಮಾಡಬೇಕು? ಆದ್ದರಿಂದ ಈಗ ಉತ್ಪಾದನೆ ಮಾಡುತ್ತಿರತಕ್ಕಂಥ 21 ಮಿಲಿಯನ್ ಯೂನಿಟ್‌ನ ಮಟ್ಟವನ್ನೇ ಕಾಯ್ದುಕೊಂಡು ಬರುತ್ತಿದ್ದೇವೆ. ಆದರೂ ಈಗ ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ. We have tried to overdraw one million unit power on the

hydel project to tide over these difficulties. ಇದು ಮೊದಲನೆಯದು. ಎರಡನೆಯದಾಗಿ, ನಾವು ಮಹಾರಾಷ್ಟ್ರದಿಂದ 2 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುತ್ತಿದ್ದೆವು. ಈಗ ಅಲ್ಲಿ ಸ್ವಲ್ಪಮಟ್ಟಿಗೆ ಬಿಕ್ಕಟ್ಟು ಪ್ರಾರಂಭ ವಾಗಿರುವುದರಿಂದ ಅವರು ಈಗ 2 ಮಿಲಿಯನ್ ಯೂನಿಟ್ಟಿಗೆ ಬದಲು ಒಂದು ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿಯನ್ನು ಮಾತ್ರ ಕೊಡುತ್ತಿದ್ದಾರೆ. ಆದರೂ ಇನ್ನೂ ನಮಗೆ ವಿದ್ಯುಚ್ಛಕ್ತಿ ಬೇಕು. ಇನ್ನೂ 3 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿಯನ್ನು ಬೇಕಾದರೂ ತೆಗೆದುಕೊಳ್ಳೋಣ. ಆದರೆ ಕೊಡುವವರು ಯಾರು, ಯಾರ ಕಡೆಯಿಂದ ತೆಗೆದುಕೊಳ್ಳಬೇಕು? ಇವತ್ತು ತಮಿಳುನಾಡಿನಲ್ಲಿ ಸರ್‌ಪ್ಲಸ್ ಇಲ್ಲ, ಅವರು ನಮಗೆ ಕೊಡುತ್ತಿಲ್ಲ. ಕೇರಳಕ್ಕೆ ನಾವೇ ಕೊಡಬೇಕಾಗುತ್ತದೆ ಏಕೆಂದರೆ ಅಲ್ಲಿ ಸರ್‌ಪ್ಲಸ್ ಇಲ್ಲ. ಹೀಗಿರುವಾಗ ನಾವು ಇನ್ನೂ ಯಾವ ಭಾಗದಿಂದ ವಿದ್ಯುಚ್ಛಕ್ತಿಯನ್ನು ತರಬೇಕು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ನಿನ್ನೆಯ ದಿವಸ ರಾಮಕೃಷ್ಣ ಹೆಗಡೆಯವರು, ರಾಜ್ಯ ಸರ್ಕಾರಬಂದು ನನ್ನನ್ನು ಕೇಳಲಿ, ನಾನು ಕೊಡಿಸಿ ಕೊಡುತ್ತೇವೆ, ಆದರೆ ಇವರು ಬರುತ್ತಿಲ್ಲ, ಅದಕ್ಕಾಗಿ ನಾನು ಮಾಡಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ : ಅದನ್ನೂ ಹೇಳುತ್ತೇನೆ ಕೇಳಿ. ನಿನ್ನೆ ನಮ್ಮ ಮಾಜಿ ಮುಖ್ಯ ಮಂತ್ರಿಗಳಾದಂಥ ರಾಮಕೃಷ್ಣ ಹೆಗಡೆಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇವತ್ತು ಅವರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾರೆ. ಬಹಳ ಸಂತೋಷ. ನಮಗೆ ಅವರಿಂದ ಲಾಭವಾಗಬೇಕು ಮತ್ತು ಸಹಾಯವಾಗಬೇಕು. ನಿನ್ನೆ ಅವರು ಆ ಹೇಳಿಕೆಯನ್ನು ಕೊಟ್ಟಾದಮೇಲೆ, ನಮ್ಮ ಕೆ.ಇ.ಬಿಯ ಕಾರ್ಯದರ್ಶಿಗಳು ಕೇಂದ್ರ ಸರ್ಕಾರದ ಇಂಧನ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರವನ್ನು ಬರೆದು, ನಮಗೆ ವಿದ್ಯುಚ್ಛಕ್ತಿಯ ಅವಶ್ಯಕತೆ ಇದೆ. ಇನ್ನು 3 ಅಥವಾ 4 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿಯನ್ನು ಕೊಡಲು ತಾವು ದಯವಿಟ್ಟು ಕ್ರಮ ಕೈಗೊಳ್ಳಿ ಎಂದು ಬರೆದು, ಆ ಪತ್ರದ ನಕಲನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ಕಳುಹಿಸಲು ಏರ್ಪಾಡು ಮಾಡಿದ್ದಾರೆ. ನಮಗೆ ವಿದ್ಯುಚ್ಛಕ್ತಿ ಎಲ್ಲಿಂದ ಬರಬೇಕು ಎನ್ನುವುದು ಗೊತ್ತಿಲ್ಲ. ಯಾವ ರಾಜ್ಯದಲ್ಲಿ ಸರ್‌ಪ್ಲಸ್ ಉಂಟು ಎಂಬುದು ಗೊತ್ತಿಲ್ಲ. ಒರಿಸ್ಸಾದಿಂದ ಬರಲು ಆಗುತ್ತದೆಯೇ? ಉತ್ತರ ಪ್ರದೇಶದಿಂದ ಬರಲು ಆಗುತ್ತದೆಯೇ? ಎಲ್ಲಿದೆ ಎಂದು ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ನನಗೆ ಒಂದು ಪತ್ರ ಬರೆದರೆ ಸಾಕು ಎಂದು ಅವರು ಹೇಳಿದ್ದಾರೆ. When real power lies with Mr. Hegde, why are you going here and there.

ಶ್ರೀ ಎಂ. ಸಿ. ನಾಣಯ್ಯ : ಅವರು ಹೇಳಿಕೆ ಕೊಟ್ಟಾದ ಮೇಲೆ ರಾಜ್ಯ ಸರ್ಕಾರ ಅದಕ್ಕೆ ಸ್ಪಂದಿಸಿದೆ.

ಶ್ರೀ ವಾಟಾಳ್ ನಾಗರಾಜ್ : ವಿದ್ಯುಚ್ಛಕ್ತಿಯನ್ನು ಕೊಡುತ್ತೇನೆ ಬನ್ನಿ ಎಂದು ಒಂದು ಕಡೆ ಜನತಾದಳ ಸರ್ಕಾರವನ್ನು ಕರೆಯುತ್ತಿದ್ದಾರೆ. ಮತ್ತೊಂದು ಕಡೆ, ಶಾಸಕರುಗಳೆಲ್ಲಾ ಆ ಪಕ್ಷವನ್ನು ಬಿಟ್ಟು

ಹೊರಗಡೆ ಬನ್ನಿ, ನಾಯಕತ್ವ ಬಿಟ್ಟು ಬನ್ನಿ ಎಂದು ಹೇಳುತ್ತಿದ್ದಾರೆ. ನಿಮ್ಮ ಶಾಸಕರು ಹೋಗುತ್ತಿದ್ದಾರೆಯೇ, ಹೇಗೆ? ಏನು ಪರಿಸ್ಥಿತಿ ಇದೆ? ನಿನ್ನೆ ಎಲ್ಲಾ ಪತ್ರಿಕೆಗಳ ಮುಖ ಪುಟದಲ್ಲಿ ಹಾಗೂ ಇತರ ಪುಟಗಳಲ್ಲಿ, ಈ ಶಾಸನಸಭೆಯ ಚರ್ಚೆಗಿಂತ ಹೆಚ್ಚಾಗಿ ಲೋಕಶಕ್ತಿಯ ಸಭೆಯ ಬಗ್ಗೆ ಬಂದಿದೆ. ಅವರು ನಿಮ್ಮನ್ನು ಕರೆಯುತ್ತಿದ್ದಾರೆ. ಯಾರು ಯಾರು ಹೊರಟಿದ್ದಾರೆ ಅಥವಾ ಹೋಗುವುದಕ್ಕೆ ತಯಾರಾಗಿದ್ದಾರೆ ಏನು ಪರಿಸ್ಥಿತಿ ಇದೆ ಎನ್ನುವುದನ್ನು ತಿಳಿಸಬೇಕು. ಏಕೆಂದರೆ, ಶಾಸನಸಭೆ ನಡೆಯುವಾಗ ಅವರು ಈ ರೀತಿ ಬಹಿರಂಗವಾಗಿ ಪಕ್ಷಾಂತರಕ್ಕೆ ಬೆಂಬಲವನ್ನು ಕೊಟ್ಟು ಹೇಳುತ್ತಿದ್ದಾರೆ. ಈ ರೀತಿ ಪಕ್ಷಾಂತರಕ್ಕೆ ಬೆಂಬಲವನ್ನು ಕೊಟ್ಟಿರುವಾಗ ನಿಮ್ಮಲ್ಲಿ ಯಾರಾದರೂ ಅದಕ್ಕೆ ಕಿವಿಗೊಟ್ಟಿದ್ದಾರೆಯೇ ಅಥವಾ ಹೋಗುತ್ತಿದ್ದಾರೆಯೇ? ಆ ರೀತಿಯ ಪರಿಸ್ಥಿತಿ ಇದೆಯೇ? ಏಕೆಂದರೆ ಇಲ್ಲಿ ನಾವು ಬೆಳಿಗ್ಗೆಯಿಂದ ಕೋರಂಗೋಸ್ಕರ ಅರ್ಧ ಗಂಟೆ ಕುಳಿತಿದ್ದು ಆಯಿತು. ಆದರೂ ಸಹ ಬಹಳ ಖುರ್ಚಿಗಳು ಖಾಲಿ ಇವೆ. ಆ ರೀತಿಯ ವ್ಯವಸ್ಥೆ ಏನಾದರೂ ನಡೆಯುತ್ತಿದೆಯೇ? ಎನ್ನುವುದನ್ನು ತಾವು ಈ ಸದನದಲ್ಲಿ ಹೇಳಿದರೆ ಒಳ್ಳೆಯದು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೇ, ಕೋರಂ ಈ ಕಡೆಯೂ ಕಡಿಮೆ ಇದೆ, ಆ ಕಡೆಯೂ ಕಡಿಮೆ ಇದೆ. ಏಕೆಂದರೆ ಇವತ್ತು ಶುಕ್ರವಾರ. ನಾಳೆ ಶನಿವಾರ ಮತ್ತು ಭಾನುವಾರಗಳಂದು ಈ ಸಭೆ ಇರುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಇವತ್ತು ಮಾತ್ರವಲ್ಲ, ಪ್ರತಿದಿವಸವೂ ಶುಕ್ರವಾರವೇ?

ಶ್ರೀ ಎಂ. ಸಿ. ನಾಣಯ್ಯ : ಸುರೇಶ್‌ಕುಮಾರ್‌ರವರು ಬೆಂಗಳೂರಿನಲ್ಲೇ ಇದ್ದಾರೆ. ನೀವು ಬಿಜಾಪುರ ಅಥವಾ ರಾಯಚೂರಿಗೆ ಹೋಗಬೇಕಾಗಿಲ್ಲ. ವಾಟಾಳ್ ನಾಗರಾಜ್‌ರವರು ಬೆಂಗಳೂರಿನವರು. ಅವರು ಚಾಮರಾಜನಗರಕ್ಕೆ ನಾಳೆ ಹೋಗೆ ಹೋಗುತ್ತಾರೆ. ನೀವು ಇಲ್ಲಿ ಉಳಿದುಕೊಳ್ಳುವುದಿಲ್ಲ. ಬೆಂಗಳೂರಿನಲ್ಲಿ ಇರತಕ್ಕಂಥವರೂ ಕೂಡ ಕೆಲವು ಸಂದರ್ಭಗಳಲ್ಲಿ ಖಾಲಿಯಾಗುತ್ತಾರೆ. ಆದ್ದರಿಂದ ಈ ಕೋರಂಗೂ, ನಿನ್ನೆ ಕೊಟ್ಟಿರತಕ್ಕಂಥ ಕರೆಗೂ ಏನೂ ಸಂಬಂಧವಿಲ್ಲ. ಅದರ ಬಗ್ಗೆ ನಾನು ಏನೂ ಪ್ರತಿಕ್ರಿಯೆ ವ್ಯಕ್ತಮಾಡುವುದಿಲ್ಲ. ಇದು ಬಹಳಷ್ಟು ತಿಂಗಳುಗಳಿಂದ ನಡೆಯುತ್ತಿದೆ. ನಾವು ಏನನ್ನು ಮಾಡಬೇಕೋ ಅದನ್ನು ಈ ಸದನದಲ್ಲಿ ಮಾಡಿ ತೋರಿಸಿ ಕೊಟ್ಟಾಗಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಬೇರೆ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡಿಸಲು ಪ್ರಯತ್ನ ಹಾಗೂ ಸಹಾಯ ಮಾಡುತ್ತೇನೆ ಎನ್ನುವ ಮಾತನ್ನು ಆಡಿದ್ದಾರೆ. ಇದಕ್ಕೆ ರಾಜ್ಯ ಸರ್ಕಾರ ಕೂಡಲೇ ಸ್ಪಂದಿಸಿದೆ. ನಿನ್ನೆ ಅವರು ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ, ಇವತ್ತು ನಾವು ಸಂಬಂಧಪಟ್ಟಿರತಕ್ಕಂಥ ಕಾರ್ಯದರ್ಶಿಗಳಿಗೆ ಈ ಬಗ್ಗೆ ಒಂದು ಪತ್ರ ಬರೆದಾಗಿದೆ. ನಮಗೆ ಎಲ್ಲಿಂದಾದರೂ ಸರಿ ವಿದ್ಯುಚ್ಛಕ್ತಿ ಬೇಕು. ನಾವು ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳಲು ಸಿದ್ಧವಾಗಿದ್ದೇವೆ. ಮಹಾರಾಷ್ಟ್ರದವರು ಕೊಡುತ್ತಿದ್ದಂಥ 2 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿಗೆ ಬದಲು ಇವತ್ತು ಒಂದು ಮಿಲಿಯನ್ ಯೂನಿಟ್ ಕೊಡುತ್ತಿದ್ದಾರೆ. ನಾವು ಅವರನ್ನು ಮತ್ತೆ ಒಂದು ಮಿಲಿಯನ್ ಯೂನಿಟ್ ಹೆಚ್ಚಿಗೆ ಕೊಡಿ ಎಂದು ಕೇಳುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಪತ್ರಿಕೆಯವರು ಕೇಳಿದಾಗ, ಅವರೇ ನೇರವಾಗಿ ಈ ವಿಷಯವನ್ನು ಪ್ರಸ್ತಾಪ ಮಾಡಿ ಹೇಳಿದ್ದಾರೆ. ಅವರು ನನಗೆ ಒಂದು ಪತ್ರ ಬರೆದು ರೆಪ್ರೆಸೆಂಟ್ ಮಾಡಿದರೆ ನಾನೇ ಪವರ್ ಮಂತ್ರಿಗಳಿಗೆ ಹೇಳಿ ಕೊಡಿಸುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ ಮೇಲೆ, ಅದು ಎಲ್ಲಿಂದಾದರೂ ಬರುತ್ತದೆ. ಕಾಗದವನ್ನು ಇಲ್ಲಿನ ಕಾರ್ಯದರ್ಶಿಗಳು ಕೇಂದ್ರ ಸರ್ಕಾರದ ಕಾರ್ಯದರ್ಶಿಗಳಿಗೆ ಬರೆದರು. ಆದರೆ ಅವರ ಅಪೇಕ್ಷೆ, ಮಂತ್ರಿಗಳು ತಮ್ಮ ಹತ್ತಿರ ಬರಬೇಕು ಎನ್ನುವುದಾಗಿದೆ. ನಿಮ್ಮ ಕಾರ್ಯದರ್ಶಿಗಳು ಅವರನ್ನು ಕೇಳಬಹುದು, ಆದರೆ ನೀವು ಇವರನ್ನು ಕೇಳುವುದಕ್ಕೆ ಆಗುವುದಿಲ್ಲವೇ? ಜೆ.ಹೆಚ್. ಪಟೇಲರು ಬಂದು ನನ್ನನ್ನು ಕೇಳಲಿ, ನಾನು ಕರೆದುಕೊಂಡು ಹೋಗಿ ಮಾಡಿಕೊಡುತ್ತೇನೆ ಎಂದು ನಅವರು ಹೇಳಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಅಂಥ ಮಡಿವಂತಿಕೆ ಈ ಸರ್ಕಾರಕ್ಕೆ ಇಲ್ಲ. ರಾಜ್ಯದ ಹಿತಾಸಕ್ತಿಗಾಗಿ ನಾವು ಯಾರನ್ನಾದರೂ ಭೇಟಿ ಮಾಡಲು ಸಿದ್ಧ. ತಮ್ಮ ಗಮನಕ್ಕೆ ತರುತ್ತಿರತಕ್ಕಂಥಾದ್ದು ಏನೆಂದರೆ, ನಾವು ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ದೆಹಲಿಯಲ್ಲಿ ರಾಮಕೃಷ್ಣ ಹೆಗಡೆಯವರನ್ನು ಕಂಡು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಿರತಕ್ಕಂಥ ಮತ್ತು ಅವರ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥ ಅನೇಕ ವಿಷಯಗಳ ಬಗ್ಗೆ ಮನವಿ ಮಾಡಿದ್ದೇವೆ. ಅಲ್ಲದೆ, ಕಾವೇರಿ ವಿಚಾರದಲ್ಲಿ ಮತ್ತು ಬರಪರಿಹಾರ ನಿಧಿಯನ್ನು ಕೊಡಿಸುವಲ್ಲೂ ತಮ್ಮ ಸಹಕಾರ ಬೇಕಾಗಿದೆ ಬೆಂಗಳೂರಿನ ಸೌಂದರ್ಯೀಕರಣಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದಕ್ಕೂ ತಮ್ಮ ಸಹಾಯ ಬೇಕು ಎಂದು ಹೇಳಿದ್ದೇವೆ. ಈಗಾಗಲೇ ಒಂದು ಪತ್ರವನ್ನು ಬರೆದಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಬರೆಯುತ್ತಾರೆ. ಅದಕ್ಕೆ ನಮ್ಮ ಆಕ್ಷೇಪಣೆಯೇನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ನೀವು ಈ ರೀತಿ ಮನವಿ ಕೊಟ್ಟಿದ್ದರೆ ಅವರು ಈ ಮಾತನ್ನು ಹೇಳುತ್ತಿರಲಿಲ್ಲ. ನೀವು ಇದನ್ನು ಬಿಟ್ಟು ಬೇರೆ ಬೇರೆ ವಿಷಯಗಳ ಬಗ್ಗೆ ಕೊಟ್ಟಿದ್ದೀರಿ. ನೀವು ಕೊಟ್ಟಿದ್ದರೆ, ಅವರು ರೆಪ್ರೆಸೆಂಟೇಷನ್ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದರು. ವಿದ್ಯುಚ್ಛಕ್ತಿ ಒಂದನ್ನು ಬಿಟ್ಟು ಬೇರೆ ವಿಷಯಗಳ ಬಗ್ಗೆ ಮಾತನಾಡಿದ್ದೀರಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅವರು ಇವರನ್ನು ಕರೆದಿರುವುದು ಪವರ್ ಕೊಡಿಸುವುದಕ್ಕೋಸ್ಕರ ಅಲ್ಲ. ಇವರ ಹತ್ತಿರ ಇರುವ ಪವರ್ ಅನ್ನು ಕಿತ್ತುಕೊಳ್ಳಲು ಅವರು ಕರೆದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೆಗಡೆಯವರು ಹೇಳುವುದು ಏನೆಂದರೆ, real power lies with me. You come here, I will help you ಎಂದು, ಆದರೆ ನೀವು ಹೋಗುತ್ತಿಲ್ಲ.

ಶ್ರೀ ಎಂ. ಸಿ. ನಾಣಯ್ಯ : ಶ್ರೀಮಾನ್ ಶ್ರೀರಾಮರೆಡ್ಡಿಯವರು ಹೇಳುತ್ತಿರತಕ್ಕಂಥ ಪವರ್ ಯಾವುದೆಂದು ನಮಗೆ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಪ್ರಕಾಶ್ ಅವರು ನಾವು ದೆಹಲಿಯಲ್ಲಿ ರಾಮಕೃಷ್ಣ ಹೆಗಡೆ -ಯವರನ್ನು ಭೇಟಿ ಮಾಡಿದ್ದೆವು, ಅಲ್ಲಿ ಮಾತುಕತೆಯಾಡಿದ್ದೇವೆ ಎಂದು ಹೇಳಿದರು. ಬಹಳ

ಸಂತೋಷ. ತಾವು ಗೌಪ್ಯವಾಗಿ ಭೇಟಿ ಮಾಡಿದ್ದೀರಾ. ಏನೇನು ಮಾತನಾಡಿದಿರಿ ಎಂಬುದು ನಮಗೆ ಗೊತ್ತಿಲ್ಲ. ಇಷ್ಟೆಲ್ಲಾ ಭೇಟಿ ಮಾಡಿದ ಮೇಲೂ ಅವರು, ಈ ಸರ್ಕಾರ ಅದಕ್ಷತೆಯಿಂದ ಕೂಡಿದೆ, ಸರ್ಕಾರ ಸರಿಯಿಲ್ಲ, ಇಲ್ಲಿರತಕ್ಕಂಥ ಶಾಸಕರು ಮುಂದಿನ ಚುನಾವಣೆಯಲ್ಲಿ ಗೆಲ್ಲುವುದಿಲ್ಲ, ನೀವೆಲ್ಲಾ ನಮ್ಮ ಪಕ್ಷಕ್ಕೆ ಬನ್ನಿ ಎಂದು ಬಹಿರಂಗವಾಗಿ ಆಹ್ವಾನ ಕೊಡುತ್ತಿದ್ದಾರಲ್ಲಾ, ಇದರ ಬಗ್ಗ ನಿಮ್ಮ ಸರ್ಕಾರದ ನಿಲುವು ಏನು ಎನ್ನುವುದನ್ನು ಸ್ಪಷ್ಟಪಡಿಸಿ. ನಾನು ಉಪ ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ, ನಮ್ಮ ಮಾತನ್ನು ನೀವು ಇಷ್ಟು ಲಘುವಾಗಿ ಕೇಳಿಸಿಕೊಂಡರೆ ಹೇಗೆ?

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ನಾನು ಗಂಭೀರವಾಗೇ ಕೇಳುತ್ತಿದ್ದೇನೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಿತ್ರರಾಗಿರತಕ್ಕಂಥ ಪ್ರಕಾಶ್‌ರವರು ಹೇಳಿದ ಹಾಗೆ ನಮ್ಮ ಸರ್ಕಾರಕ್ಕೆ ಯಾವ ಮಡಿವಂತಿಕೆಯೂ ಇಲ್ಲ. ನಮ್ಮ ಸರ್ಕಾರ ಜನರ ಹಿತಕ್ಕೋಸ್ಕರ ನಾವು ಯಾರನ್ನು ಬೇಕಾದರೂ ಭೇಟಿ ಮಾಡಲಿಕ್ಕೆ ತಯಾರಾಗಿದ್ದೇವೆ. ಬಹುಶಃ ನಮಗೆ ಹೆಚ್ಚಿಗೆ ವಿದ್ಯುಚ್ಛಕ್ತಿ ಸಿಗುತ್ತದೆ ಎಂದರೆ, ಯಾರು ವಿದ್ಯುಚ್ಛಕ್ತಿ ಕೊಡುತ್ತಾರೆಂದು ಎಲ್ಲಿ ಹೇಳುತ್ತಾರೆ ಅವರ ಹತ್ತಿರಕ್ಕೆ ಕೂಡ ಹೋಗಲಿಕ್ಕೆ ಇರತಕ್ಕಂಥ ಪ್ರಯತ್ನವನ್ನೂ ಕೂಡ ಮಾಡುತ್ತೇವೆ. ನಾವೇನೂ ಹಿಂದುಮುಂದು ನೋಡುವುದಿಲ್ಲ. ನಮಗೆ ಒಟ್ಟಾರೆ ಹೆಚ್ಚಿಗೆ ವಿದ್ಯುಚ್ಛಕ್ತಿ ಬೇಕು. ಹೆಚ್ಚಿಗೆ ಹಣ ಕೊಟ್ಟರೂ ಪರವಾಗಿಲ್ಲ ವಿದ್ಯುಚ್ಛಕ್ತಿಯನ್ನು ತರುತ್ತೇವೆ. ಈಗ ಮಹರಾಷ್ಟ್ರದಿಂದ ಬರುತ್ತಿರತಕ್ಕಂಥ ವಿದ್ಯುಚ್ಛಕ್ತಿಗೆ ನಾವು ಹೆಚ್ಚಿಗೆ ಹಣವನ್ನು ಕೊಡುತ್ತಿದ್ದೇವೆ. ಒಂದು ಯೂನಿಟ್‌ಗೆ ಹಣವನ್ನು ನಾವು ಇಲ್ಲಿ ಎಷ್ಟು ವಸೂಲಾತಿ ಮಾಡುತ್ತೇವೋ ಅದಕ್ಕಿಂತ ಹೆಚ್ಚಿಗೆ ಹಣವನ್ನು ಒಂದು ಯೂನಿಟ್‌ಗೆ ನಾವು ಕೊಡುತ್ತಿದ್ದೇವೆ. ಆ ಪರಿಸ್ಥಿತಿಯನ್ನೂ ಕೂಡ ನಾವು ಗಮನದಲ್ಲಿಟ್ಟುಕೊಂಡು ಕೆಲಸವನ್ನು ಮಾಡುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಇವತ್ತು ಶರಾವತಿ ಜಲಾಶಯದಲ್ಲಿ ಮುಂದಿನ ಮಳೆಗಾಲ ಬರುವಲ್ಲಿವರೆಗೆ ಅಂದರೆ ಜೂನ್ 30ರ ವರೆಗೆ ನೀರಿನ ಲೆವೆಲ್‌ನ್ನು ಇಟ್ಟುಕೊಂಡು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬೇಕಾಗುತ್ತದೆ. ಮುಂದಿನ ವರ್ಷಕ್ಕೆ ಕ್ಯಾರಿಓವರ್ 5 ಪರ್ಸೆಂಟ್ ಇಟ್ಟುಕೊಂಡು ಟೈಮ್ ಟೇಬಲ್ ಮಾಡುತ್ತೇವೆ. ಇದರ ಜೊತೆಗೆ ನೈವೇಲಿ, ರಾಮಗುಂಡಂ ಹಾಗೂ ಕಲ್ಪಕಂ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ನಮ್ಮ ರಾಜ್ಯಕ್ಕೆ ಬರಬೇಕಾಗಿರತಕ್ಕಂಥ ಸೆಂಟ್ರಲ್ ಶೇರ್ ಬರುತ್ತಿಲ್ಲ. ರಾಮಗುಂಡಂನಿಂದ ಬರಬೇಕಾದಂಥ 210 ಮೆಗಾ ವ್ಯಾಟ್ ವಿದ್ಯುತ್ ಅಲ್ಲಿ ಒಂದು ಯೂನಿಟ್ ಕೆಟ್ಟುಹೋಗಿದ್ದರಿಂದ ಬರುತ್ತಿಲ್ಲ. ಅದೇ ರೀತಿ ನೈವೇಲಿ ಮತ್ತು ಕಲ್ಪಕಂ ವಿದ್ಯುತ್ ಕೇಂದ್ರಗಳಲ್ಲಿ ತೊಂದರೆಯಾಗಿರುವುದರಿಂದ ಅಲ್ಲಿಂದಲೂ ಕೂಡ ಬರಬೇಕಾಗಿರತಕ್ಕಂಥ ಪವರ್ ಬರುತ್ತಿಲ್ಲ. ರಾಯಚೂರು ಥರ್ಮಲ್ ಪ್ಲಾಂಟ್‌ನಲ್ಲಿ ಒಂದು ಯೂನಿಟ್ ಕೆಟ್ಟುಹೋಗಿರುವುದರಿಂದ ಕೆಲವು ದಿವಸಗಳಿಂದ ಅಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲಿಕ್ಕೆ ಆಗಲಿಲ್ಲ. ಬಹುಶಃ ಈಗ ರಾಯಚೂರಿನಲ್ಲಿ ದುರಸ್ತಿಗೆ ಒಳಗಾಗಿದ್ದ ವಿದ್ಯುತ್ ಉತ್ಪಾದನಾ ಘಟಕ ಕೆಲಸ ಮಾಡಲು ಪ್ರಾರಂಭಿಸಿದೆ. ಇಷ್ಟೆಲ್ಲಾ ತೊಂದರೆಗಳ ಪರಿಣಾಮವಾಗಿ ನಮಗೆ 3 ಮಿಲಿಯನ್ ಯೂನಿಟ್‌ನಷ್ಟು ಬರಬೇಕಾಗಿದ್ದ ವಿದ್ಯುಚ್ಛಕ್ತಿ ಬಾರದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿರತಕ್ಕಂಥ ಹಂತದಲ್ಲಿ ನಾವು ಏನು ಕಾರ್ಯಕ್ರಮ ಕೈಗೊಳ್ಳಬೇಕು ಮಾನ್ಯ ಉಪಾಧ್ಯಕ್ಷರೆ? ನಮಗೆ ಬರಬೇಕಾದ

ವಿದ್ಯುಚ್ಛಕ್ತಿ ಬಾರದಿರುವುದರಿಂದ ವಿದ್ಯುಚ್ಛಕ್ತಿ ಕೊಡಬೇಕು ಎಂದು ಹೇಳಿದರೆ ಹೇಗೆ? ನಮ್ಮ ರಾಜ್ಯದಲ್ಲಿ 68 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತೇವೆ ಮತ್ತು ಅದನ್ನು ರಾಜ್ಯಕ್ಕೆ ಹಂಚುತ್ತಿದ್ದೇವೆ. ಈಗ ನಮಗೆ ಬೇಕಾಗಿರತಕ್ಕಂಥ ವಿದ್ಯುತ್ 73 ಮಿಲಿಯನ ಯೂನಿಟ್ಸ್ ಅಂದರೆ 5 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿ ಹೆಚ್ಚಿಗೆ ಬೇಕಾಗಿದ್ದು ಅದನ್ನು ಎಲ್ಲಿಂದ ಕೊಡಬೇಕು? ಇವತ್ತು ಇದನ್ನು ವಿಚಾರ ಮಾಡಬೇಕಾಗುತ್ತದೆ. ಈ ತೊಂದರೆಗಳನ್ನು ವಿಚಾರ ಮಾಡಿದ ಹಿನ್ನೆಲೆಯಲ್ಲಿ ಕೆ.ಇ.ಬಿ.ಯವರು, ಕೆ.ಪಿ.ಸಿ.ಯವರು ಮತ್ತು ಸರ್ಕಾರ ಯೋಚನೆ ಮಾಡಿ 68 ಮಿಲಿಯನ್ ಯೂನಿಟ್ ಪವರನ್ನು ಹೇಗಾದರೂ ಮೆಯಿಂಟೇನ್ ಮಾಡಿಕೊಂಡು ಹೋಗಬೇಕೆನ್ನುವ ದೃಷ್ಟಿಯಿಂದ ಬೆಂಗಳೂರು ನಗರವನ್ನು 4 ಫೀಡರ್ಸ್ ಆಗಿ ಡಿವೈಡ್ ಮಾಡಿದ್ದೇವೆ. ಬೆಳಿಗ್ಗೆ 6 ಗಂಟೆಯಿಂದ 10 ಗಂಟೆವರೆಗೆ ಅಂದರೆ 6 ರಿಂದ 7 ಗಂಟೆ, 7 ರಿಂದ 8 ಗಂಟೆ, 8 ರಿಂದ 9 ಗಂಟೆ ಮತ್ತು 9 ರಿಂದ 10 ಗಂಟೆವರೆಗೆ ಹೀಗೆ ಒಂದೊಂದು ಭಾಗದಲ್ಲಿ ಒಂದೊಂದು ಗಂಟೆ ಕಾಲ ಮತ್ತು ಮಧ್ಯಾಹ್ನ 2 ರಿಂದ 6 ಗಂಟೆಯೊಳಗೆ ಒಂದೊಂದು ಗಂಟೆ ಕಾಲ ಅರ್ಬನ್ ಲೋಡ್ ಶೆಡ್ಡಿಂಗ್ ಎಂದು ಅಫಿಷಿಯಲ್ ಆಗಿ ಮಾಡಲಿಕ್ಕೆ ಕ್ರಮ ಕೈಗೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಿದ್ಯಾರ್ಥಿಗಳಿಗೆ ಪಿ.ಯುಸಿ. ಮತ್ತಿತರ ಪರೀಕ್ಷೆಗಳು ನಡೆಯುವುದರಿಂದ ಅವರಿಗೆ ತೊಂದರೆ ಆಗದ ಹಾಗೆ ಲೋಡ್ ಶೆಡ್ಡಿಂಗ್ ಮಾಡುವುದಕ್ಕೆ ಕೆ.ಇ.ಬಿ. ಯವರಿಗೆ ಸರ್ಕಾರದ ವತಿಯಿಂದ ಹೇಳಬೇಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಅರ್ಬನ್ ಏರಿಯಾದಲ್ಲಿ ಲೋಡ್ ಶೆಡ್ಡಿಂಗ್ ಬಗ್ಗೆ ಹೇಳಿದರು, ಹಾಗೆಯೇ ರೂರಲ್ ಏರಿಯಾದಲ್ಲಿ ಯಾವ ರೀತಿ ಲೋಡ್ ಶೆಡ್ಡಿಂಗ್ ಮಾಡುತ್ತಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಂ. ಸಿ. ನಾಣಯ್ಯ : ಬೆಳಿಗ್ಗೆ 6 ಗಂಟೆಯ ಹೊತ್ತಿಗೆ ಬೆಳಕು ಹರಿಯುತ್ತದೆ. ಇದು ತಮಗೆಲ್ಲಾ ಗೊತ್ತಿದೆ. ಬೆಳಿಗ್ಗೆ 6 ರಿಂದ 10 ಗಂಟೆಯ ವರೆಗೆ ಒಂದೊಂದು ಭಾಗದಲ್ಲಿ ಒಂದೊಂದು ಗಂಟೆ ಕಾಲ ಮತ್ತು ಮಧ್ಯಾಹ್ನ 2 ಗಂಟೆಯಿಂದ ಸಂಜೆ 6 ಗಂಟೆಯೊಳಗೆ ಒಂದೊಂದು ಗಂಟೆ ಕಾಲ ಕರೆಂಟನ್ನು ತೆಗೆಯಲಾಗುವುದು.

ಶ್ರೀ ಎಸ್. ಸುರೇಶ್ ಕುಮಾರ್ : ಇದು ಶೆಡ್ಯೂಲ್ ಬಗ್ಗೆ ಆಯಿತು. ಅನ್-ಶೆಡ್ಯೂಲ್ ಬಗ್ಗೆ ಏನು ಮಾಡುತ್ತೀರಿ ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಾಣಯ್ಯನವರಿಗೆ ಅವರ ಅಧಿಕಾರಿಗಳು ಒಂದು ಗಂಟೆ ಕಾಲ ಲೋಡ್ ಶೆಡ್ಡಿಂಗ್ ಮಾಡುತ್ತೇವೆ ಎಂದು ಹೇಳಿರಬಹುದು. ಇದು ಒಂದು ಗಂಟೆ ಕಾಲ ಪವರ್ ಕಟ್ ಅಲ್ಲ. ಇನ್ನೂ ಹೆಚ್ಚುಹೊತ್ತು ಪವರ್ ಕಟ್ ಆಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಾಣಯ್ಯನವರ ಮನೆಗೆ ಆ ತರಹ ಪವರ್ ಕಟ್ ಇರಬಹುದು. ಆದರೆ ಸಾಮಾನ್ಯ ಜನಗಳ ಮನೆಗೆ ಆ ತರಹ ಪವರ್ ಕಟ್ ಮಾಡುತ್ತಿಲ್ಲ.

ಶ್ರೀ ಎಂ. ಸಿ. ನಾಣಯ್ಯ : ಬೆಳಿಗ್ಗೆ 6 ಗಂಟೆಯಿಂದ 10 ಗಂಟೆವರೆಗೆ ಇದು ಪೀಕ್-ಅವರ್ ಆಗಿರುತ್ತದೆ. ಆ ಪೀಕ್‌ಅವರ್‌ನಲ್ಲಿ ಕೆಲವು ಸಂದರ್ಭದಲ್ಲಿ ಓವರ್‌ಲೋಡಿಂಗ್ ಮಾಡಿದಾಗ ಟ್ರಿಪ್ ಆಗುತ್ತದೆ. ಆ ಸಂದರ್ಭದಲ್ಲಿ ಕೆಲವು ಭಾಗದಲ್ಲಿ 25 ರಿಂದ 30 ನಿಮಿಷ ಕರೆಂಟ್ ಕಟ್ ಆಗಬಹುದು. ಇದನ್ನು ನಾನು ಇಲ್ಲ ಎಂದು ಹೇಳುವುದಕ್ಕೆ ತಯಯಾರಾಗಿಲ್ಲ. hardly not exceeding 25 minutes between 6 and 10. ಇದು ಕೆಲವು ಭಾಗದಲ್ಲಿ ಆಗುತ್ತಿದ್ದು ಇದನ್ನು ರಿವ್ಯೂ ಮಾಡಲಿಕ್ಕೆ ಇರತಕ್ಕಂಥ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಈಗ ಸದನಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ನಿನ್ನೆಯ ದಿವಸ ಹೇಳಿರತಕ್ಕಂಥ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ಉತ್ತರವನ್ನು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ವಿದ್ಯುಚ್ಛಕ್ತಿ ಒದಗಿಸಿಕೊಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೇ ಸ್ವತಃ ಹೋಗಿ ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಭೇಟಿ ಮಾಡಿ ಕೇಳಿಕೊಂಡರೆ ಅವರು ಸೆಂಟ್ರಲ್ ಪವರ್ ಮಿನಿಸ್ಟರ್‌ರವರ ಜೊತೆ ಮಾತನಾಡಿ ಸೆಂಟ್ರಲ್ ಗ್ರಿಡ್‌ನಿಂದ ಹೆಚ್ಚಿನ ವಿದ್ಯುಚ್ಛಕ್ತಿ ಸರಬರಾಜಿಗೆ ನಾನು ಸಹಾಯ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಶ್ರೀ ರಾಮಕೃಷ್ಣ ಹೆಗಡೆಯವರು ಮೊನ್ನೆಯ ದಿವಸ ಬಂದಾಗ ಅವರನ್ನು ಭೇಟಿ ಆಗಿ ಮಾತುಕತೆ ಆಡಿದ್ದರೆ, ಅಥವಾ ಅವರಿಗೆ ಏನಾದರೂ ಪತ್ರ ಬರೆದಿದ್ದರೆ ಅಥವಾ ಇಲ್ಲಿಂದ ಟೆಲಿಫೋನ್ ಮುಖಾಂತರ ಏನಾದರೂ ಮಾತುಕತೆ ನಡೆದಿತ್ತೇ, ಹೇಗೆ? ಇದನ್ನು ತಾವು ಹೇಳಬೇಕು. ಏಕೆಂದರೆ ಮಾನ್ಯ ರಾಮಕೃಷ್ಣ ಹೆಗಡೆಯವರು 'ಅವರು ಬಂದು ಕೇಳಿದರೆ ಕರೆಂಟ್ ಕೊಡಿಸುತ್ತೇನೆ' ಎಂದು ಹೇಳಿದ್ದಾರೆ. ಅವರ ಹೇಳಿಕೆ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಉಪಾಧ್ಯಕ್ಷರೆ, ವಿದ್ಯುಚ್ಛಕ್ತಿ ಬಗ್ಗೆ ನಿನ್ನೆ ಶ್ರೀ ರಾಮಕೃಷ್ಣ ಹೆಗಡೆಯವರು ನಮ್ಮ ಹತ್ತಿರ ಬಂದರೆ ನಾವು ಕೊಡಿಸುವುದಕ್ಕೆ ತಯಾರಾಗಿದ್ದೇವೆ. ಎನ್ನುವಂಥ ಮಾತನ್ನು ನೇರವಾಗಿ ಹೇಳಿದ್ದಾರೆ. ಮತ್ತು ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗಿದ್ದಾಗ ಅವರನ್ನು ಭೇಟಿ ಮಾಡಿ ಅವರಿಗೆ ಅನೇಕ ಮನವಿಗಳನ್ನು ಕೊಟ್ಟು ಬಂದಿದ್ದಾರೆ. ಅದನ್ನು ಪತ್ರಿಕೆಯಲ್ಲಿ ಓದಿದ್ದೇವೆ. ಹಾಗೆಯೇ ಶ್ರೀ ರಾಮಕೃಷ್ಣ ಹೆಗಡೆಯವರು ಬಹಿರಂಗವಾಗಿ ಹೇಳಿರುವಂಥದ್ದು ಏನೆಂದರೆ - 'ಮುಂದಿನ ಚುನಾವಣೆಯಲ್ಲಿ ಗೆಲ್ಲಬೇಕು ಎನ್ನುವುದಾದರೆ ಜನತಾದಳದ ಎಲ್ಲಾ ಶಾಸಕರು ಆ ಪಕ್ಷವನ್ನು ಬಿಟ್ಟು ಹೊರಗಡೆ ಬನ್ನಿ' ಎನ್ನತಕ್ಕಂಥ ಕರೆಯನ್ನು ಕೊಟ್ಟಿದ್ದಾರೆ. ಈ ಬಹಿರಂಗ ಪಕ್ಷಾಂತರವನ್ನು ನಾವು ವಿರೋಧ ಮಾಡುತ್ತೇವೆ. ಆದರೆ ಇದರಲ್ಲಿ ಏನಾದರೂ ಒಳಸಂಚು ನಡೆಯುತ್ತಿದೆಯೇ ಎನ್ನತಕ್ಕಂಥದ್ದನ್ನು ಸ್ಪಷ್ಟಪಡಿಸಬೇಕು ಎಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ.

+ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ವಿದ್ಯುಚ್ಛಕ್ತಿಯ ಪರಿಸ್ಥಿತಿ ಬಗ್ಗೆ ಈಗಾಗಲೇ ಮಾನ್ಯ ನಾಣಯ್ಯನವರು ವಿವರಿಸಿದ್ದಾರೆ. ವಿದ್ಯುತ್ ನಿರ್ವಹಣೆ ಈಗ ಬಹಳ

ಕಷ್ಟದ ಕೆಲಸವಾಗಿದೆ. ಈಗ ಬೇರೆ ರಾಜ್ಯಗಳಿಂದ ವಿದ್ಯುತ್ ತರಿಸಬೇಕೆಂದರೆ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಗೆ ವಿದ್ಯುತನ್ನು ಕೊಡುವ ಶಕ್ತಿ ಇಲ್ಲ. ಮಹಾರಾಷ್ಟ್ರ ರಾಜ್ಯಕ್ಕೆ ವಿದ್ಯುತ್ ಕೊಡುವ ಶಕ್ತಿ ಇದ್ದು ಅಲ್ಲಿಂದ ತರಿಸಿಕೊಳ್ಳುತ್ತಿದ್ದೇವೆ. ಹಿಮಾಚಲ ಪ್ರದೇಶದಲ್ಲಿ ವಿದ್ಯುತ್ ಇದೆ. ಆದರೆ ಆ ವಿದ್ಯುತನ್ನು ನಮ್ಮ ರಾಜ್ಯಕ್ಕೆ ತರುವಂಥ ವ್ಯವಸ್ಥೆ ಇಲ್ಲ. ಅಲ್ಲಿಂದ ವಿದ್ಯುತ್ ತರುವುದು ಹೇಗೆ ಎಂಬುದೇ ದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಕ್ರೊರೈಡ್ ಎಂದು ಹೇಳುತ್ತೇವೆ. ಆ ಪವರನ್ನು ಬೇರೆ ರಾಜ್ಯಕ್ಕೆ ಕೊಟ್ಟು, ಅವರಿಂದ ನಾವು ವಿದ್ಯುತ್ ತೆಗೆದುಕೊಳ್ಳುವುದು ಇದೂ ಕೂಡ ಕಷ್ಟಸಾಧ್ಯವಾದ ಮಾತು. ಬಹುಶಃ ಶ್ರೀ ಹೆಗಡೆಯವರು ವಿಷಯ ತಿಳಿದು ಹೇಳಿದರೋ ಅಥವಾ ಗೊತ್ತಿಲ್ಲದೆ ಹೇಳಿದರೋ ನನಗೆ ತಿಳಿಯುತ್ತಿಲ್ಲ. ನಾನು ಅವರಿಗೆ ಪತ್ರ ಬರೆದ ತಕ್ಷಣ ಸೆಂಟ್ರಲ್ ಗ್ರಿಡ್‌ನಿಂದ ಅವರು ವಿದ್ಯುತ್ ಕೊಡಿಸುವುದಾದರೆ ಅದಕ್ಕೆ ನಾನು ಸ್ವಾಗತ ಮಾಡುತ್ತೇನೆ. ಹೆಚ್ಚುವರಿ ವಿದ್ಯುತ್ತನ್ನು ಶ್ರೀ ಹೆಗಡೆ ಅವರು ಕೊಡಿಸುವ ಹಾಗಿದ್ದರೆ ಅವರಿಗೆ ಪತ್ರ ಬರೆಯುವುದೇ ಅಲ್ಲದೆ, ನಮ್ಮ ಇಂಧನ ಖಾತೆ ಸಚಿವರನ್ನೇ ಅವರ ಬಳಿ ಕಳುಹಿಸುತ್ತೇನೆ. ಸೆಂಟ್ರಲ್ ಗ್ರಿಡ್‌ನಿಂದ ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ ಮತ್ತು ಕೇರಳ ರಾಜ್ಯಗಳಿಗೆ ವಿದ್ಯುತ್‌ನ ಹಂಚಿಕೆ ಏನು ಇದೆ, ಆ ಹಂಚಿಕೆಯಲ್ಲಿ ಅವರು ಏನಾದರೂ ಪ್ರಭಾವ ಉಪಯೋಗಿಸಿ ಜಾಸ್ತಿ ಕೊಡಿಸಿದರೆ ನಿಜವಾಗಿಯೂ ಬಹಳ ಒಳ್ಳೆಯದಾಗುತ್ತದೆ. ಆದರೆ ಸ್ಥಿತಿ ಹಾಗೆ ಇಲ್ಲ. ಶ್ರೀ ಹೆಗಡೆಯವರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದರು, ನಾನು ಅವರ ಜೊತೆಗೆ ಇಂಧನ ಖಾತೆ ಸಚಿವನಾಗಿ ಕೆಲಸ ಮಾಡಿದ್ದೇನೆ. ಈ ವಿದ್ಯುತ್ ನಿರ್ವಹಣೆಯಲ್ಲಿ ವಿಶೇಷವಾಗಿ ಏಪ್ರಿಲ್ ಮೇ ಜೂನ್ ತಿಂಗಳಲ್ಲಿ ಆಗಬಾರದಷ್ಟು ಹಿಂಸೆ ಆಗುತ್ತದೆ. ಈ ರೀತಿಯ ಹಿಂಸೆ ತಮಿಳುನಾಡಿಗೆ ಮತ್ತು ಆಂಧ್ರಪ್ರದೇಶಕ್ಕೂ ಕೂಡ ಆಗಿದೆ. ಒಂದು ಕಾಲದಲ್ಲಿ ಅವರಿಗೆ ವಿದ್ಯುತ್ ಸರ್‌ಪ್ಲಸ್ ಆಗುತ್ತಿತ್ತು ಹಾಗೆಯೇ ಒಂದು ಕಾಲದಲ್ಲಿ ನಮಗೆ ಕೂಡ ವಿದ್ಯುತ್ ಸರ್‌ಪ್ಲಸ್ ಆಗುತ್ತಿತ್ತು. ಆದ್ದರಿಂದ ವಿದ್ಯುತ್ ಸರಬರಾಜು ಸರಿಯಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಶ್ರೀ ಹೆಗಡೆಯವರು ರಾಜ್ಯದ ಅಭಿಮಾನದಿಂದ ವಿದ್ಯುತ್ ಕೊಡಿಸುತ್ತೇವೆಂದು ಹೇಳಿದ್ದರೆ ಒಳ್ಳೆಯದು. ಅಥವಾ ರಾಜ್ಯಕ್ಕೆ ಅನುಕೂಲ ಮಾಡಿಕೊಡಬೇಕು ಎನ್ನುವ ಇಚ್ಛೆ ಇದ್ದು ಸದಿಚ್ಛೆಯಿಂದ ಹೇಳಿದ್ದರೆ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶ್ರೀ ಹೆಗಡೆಯವರು ಯಾವ ಇಚ್ಛೆಯಿಂದ ಹೇಳಿದರು? ತಮಗೆ ಏನು ಅನಿಸುತ್ತದೆ?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಈ ರೀತಿ ಸಹಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ಗೊತ್ತಿದ್ದರೆ ಈ ಮಾತು ಶ್ರೀ ಹೆಗಡೆಯವರು ಹೇಳುತ್ತಿರಲಿಲ್ಲ. ಆದರೂ ಪರವಾಗಿಲ್ಲ. ಈಗಲೂ ಅವರ ಪ್ರಭಾವ ಉಪಯೋಗಿಸಿ ಪ್ರಧಾನ ಮಂತ್ರಿಗಳಿಗೆ ಅಥವಾ ಇಂಧನ ಖಾತೆ ಮಂತ್ರಿಗಳಿಗೆ ಹೇಳಿ ಕೊಡಿಸಿದರೂ ಪರವಾಗಿಲ್ಲ, ಒಟ್ಟಿನಲ್ಲಿ ನಮಗೆ ಯಾವ ಕಡೆಯಿಂದಲಾದರೂ ವಿದ್ಯುತ್ ಸಿಕ್ಕಿದರೆ ಸಾಕು. ಇನ್ನು ಶ್ರೀ ವಾಟಾಳ್ ನಾಗರಾಜ್ ರವರು ಮಾತನಾಡುತ್ತಾ ಜನತಾದಳದ ಶಾಸಕರು ಹೊರಗಡೆ ಬರಬೇಕು ಎಂದು ಶ್ರೀ ಹೆಗಡೆಯವರು ಹೇಳಿರುವ ಬಗ್ಗೆ ಸ್ಪಷ್ಟಪಡಿಸಬೇಕು ಎಂದು ಕೇಳಿದ್ದಾರೆ. ಈಗ ನಮ್ಮ ಮನೆ ಮಗ್ಗುಲಲ್ಲಿ ದಿನಾಲು ರೈಲು ಹೋಗುತ್ತದೆ, ಅದು ಹೋಗುವಾಗಲೂ ಕೂಗುತ್ತದೆ, ಬರುವಾಗಲೂ ಕೂಗುತ್ತದೆ, ಆದರೆ ಮನೆಗೆ ಏನೂ ಆಗಿಲ್ಲ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿರತಕ್ಕಂಥ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ವಸ್ತು ಸ್ಥಿತಿಯನ್ನು ಸಮಗ್ರವಾಗಿ ಹೇಳಿದ್ದೇವೆ. ಈಗ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಕಾಲವಾಗಿರುವುದರಿಂದ ರಾತ್ರಿಹೊತ್ತು ಪವರ್ ಕಟ್ ಮಾಡುವುದು ಬೇಡ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಈ ಪಿ.ಯು.ಸಿ. ಮತ್ತಿತರ ಪರೀಕ್ಷೆಗಳು ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗಬಾರದು ಎನ್ನುವ ದೃಷ್ಟಿಯಿಂದ ಸಂಜೆ 6 ರಿಂದ ರಾತ್ರಿ 10 ಗಂಟೆಯ ವರೆಗೆ ವಿದ್ಯುತ್ ಲೋಡ್ ಶೆಡ್ಡಿಂಗ್ ಮಾಡುವುದಿಲ್ಲ. ಆದರೆ, ಕೆಲವು ಸಂದರ್ಭಗಳಲ್ಲಿ ಅನಿವಾರ್ಯ ಪರಿಸ್ಥಿತಿ ಬಂದಾಗ ಇದರ ಬಗ್ಗೆ ಗಮನಹರಿಸಿ ಸಂಬಂಧಪಟ್ಟ ಅಧಿಕಾರಿಗಳು ಪುನಃ ಮೊದಲನೆ ವಾರದಲ್ಲಿ ಸಭೆ ಸೇರುತ್ತಾರೆ. ಸೋಮವಾರವೂ ಕೂಡ ಸಭೆ ಸೇರುತ್ತಾರೆ. ರಾತ್ರಿ 6 ಗಂಟೆಯಿಂದ 10 ಗಂಟೆಯವರೆಗೆ ಯಾವುದೇ ಲೋಡ್ ಷೆಡ್ಡಿಂಗ್ ಇಲ್ಲವೆಂದು ಹೇಳಿದ್ದೇನೆ. ರಾತ್ರಿ 10 ಗಂಟೆಯ ನಂತರ ಲೋಡ್ ಷೆಡ್ಡಿಂಗ್ ಇರುವುದಿಲ್ಲವೆಂಬುದು ತಮಗೂ ಗೊತ್ತಿದೆ. ಓವರ್ ಡ್ರಾ ಆದ ಸಂದರ್ಭದಲ್ಲಿ ಅಲ್ಲಿ ಇಲ್ಲಿ ಟ್ರಿಪ್ ಆಗುವ ಸಂದರ್ಭ ಇರಬಹುದು. Certainly we will look into that.

ಉಪಾಧ್ಯಕ್ಷರು : ಉತ್ತರ ಕೊಟ್ಟಿದ್ದಾರೆ. ಮತ್ತೇಕೆ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಸೆಂಟ್ರಲ್ ಗ್ರಿಡ್‌ನಿಂದ ನಮಗೆ ಬರಬೇಕಾದ ಶೇರ್ ಬಗ್ಗೆ...

ಉಪಾಧ್ಯಕ್ಷರು : ಅವರು ಮಾತನಾಡುತ್ತಿದ್ದಾರೆ. ನೀವು ಹೀಗೆ ಮಾಡಿದರೆ ಹೇಗೆ? ಅವರಿಗೆ ಪ್ರತ್ಯೇಕ ಪತ್ರ ಬರೆದು ನಂತರ ಅವರು ನಿಮಗೆ ತಿಳಿಸುತ್ತಾರೆ. ವಿದ್ಯುತ್ ಸಚಿವರು ಇಲ್ಲಿಲ್ಲ. ಈಗ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದು. ತಾವು ಅರ್ಥ ಮಾಡಿಕೊಳ್ಳಬೇಕು. ತಾವು ಹೀಗೆ ಮಾಡಿದರೆ ಹೇಗೆ? ನಿಮಗೆ ಯಾವ ರೀತಿ ಹೇಳಬೇಕು.

ಶ್ರೀ ಎಂ. ಸಿ. ನಾಣಯ್ಯ : ಸೆಂಟ್ರಲ್ ಗ್ರಿಡ್‌ನಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಪಾಲು ಅದು ಪೂರ್ತಿಯಾಗಿ ಬರುತ್ತಿದೆಯೇ ಎಂದು ಕೇಳಿದ್ದಾರೆ. ಪೂರ್ತಿಯಾಗಿ ಬರುತ್ತಿದೆ. ಸೆಂಟ್ರಲ್ ಗ್ರಿಡ್‌ನಿಂದ ನಮಗೆ ಬರಬೇಕಾದ ಪವರ್‌ಗಿಂತ ಓವರ್ ಡ್ರಾ ಮಾಡುತ್ತಿದ್ದೇವೆ. ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮನ್ನು ವಿನಯಪೂರ್ವಕವಾಗಿ ಕೇಳುತ್ತೇನೆ ಮತ್ತು ಪತ್ರಿಕಾ ಮಿತ್ರರಿಗೆ ಕೇಳುತ್ತೇನೆ, ತಾವು, ನಾನೇನು ಓವರ್ ಡ್ರಾ ಮಾಡುತ್ತಿದ್ದೇವೆ ಎಂದು ಹೇಳುವುದನ್ನು ಪತ್ರಿಕೆಯಲ್ಲಿ ಹಾಕುವುದು ಬೇಡವೆಂದು ಹೇಳಬೇಕು. ನಮ್ಮ ಷೇರ್ ನಮಗೆ ಸಂಪೂರ್ಣವಾಗಿ ಸಿಗುತ್ತದೆ. ನಾವು ಅದನ್ನು ಡ್ರಾ ಮಾಡುತ್ತಿದ್ದೇವೆ. ಇನ್ನು, ರೂರಲ್ ಏರಿಯಾಗೆ ಸಂಬಂಧಿಸಿದಂತೆ, ಬೆ. 6 ಗಂಟೆಯಿಂದ 12 ಗಂಟೆಯವರೆಗೆ, ಮಧ್ಯಾಹ್ನ 12 ಗಂಟೆಯಿಂದ 6 ಗಂಟೆಯವರೆಗೆ... ಈಗ ಮಧ್ಯರಾತ್ರಿಯಲ್ಲಿ ಏನಾಗಿದೆಯೆಂದರೆ, ಪರಿಸ್ಥಿತಿಯ ಒತ್ತಡದಿಂದ ಕೆಲವು ಸಂದರ್ಭದಲ್ಲಿ ಕೆಲವು ಭಾಗಗಳಲ್ಲಿ ಈ ತರಹವಾಗುತ್ತಿದೆ. ಆದರೂ ಕೂಡ, ಒಂದು ದಿವಸದಲ್ಲಿ 6 ಗಂಟೆ ಇವರಿಗೆ ನಿರಂತರವಾಗಿ ಪವರ್ ಕೊಡುತ್ತಿದ್ದೇವೆ. ಮಧ್ಯ ರಾತ್ರಿಯಲ್ಲಾಗುತ್ತಿರುವ 4 ಗಂಟೆಯಲ್ಲಿ ಕೆಲವು ಸಂದರ್ಭಗಳಲ್ಲಿ 35 ನಿಮಿಷ ಅಥವಾ ಒಂದು ಗಂಟೆಯವರೆಗೆ ಅಲ್ಲಿ, ಇಲ್ಲಿ ತೊಂದರೆಯಾಗುತ್ತಿತ್ತು, ಆದರೆ, ಸಾಧಾರಣವಾಗಿ 8 ಗಂಟೆಯಿಂದ 9 ಗಂಟೆಯವರೆಗೆ ರೂರಲ್ ಏರಿಯಾದಲ್ಲಿ ಪಂಪ್‌ಸೆಟ್‌ಗೆ ಪವರ್ ಕೊಡಲು ಕ್ರಮ ಕೈಗೊಂಡಿದ್ದೇವೆ.

ಇದನ್ನು ಕೂಡ ಮುಂದಿನ ವಾರ ನಾವು ರಿವ್ಯೂ ಮಾಡುತ್ತಿದ್ದೇವೆ. ಹೆಚ್ಚಿನ ಪವರ್ ಬರುವ ಸಂದರ್ಭ ಬಂದಾಗ, ರೂರಲ್ ಏರಿಯಾಗೆ 10 ಗಂಟೆಯವರೆಗೆ ಪಂಪ್‌ಸೆಟ್‌ಗೆ ಪವರ್ ಕೊಡಲು ಈಗಲೂ ಅವಕಾಶವಿದೆ. 10 ಗಂಟೆಯವರೆಗೆ ನಿರಾಂತಕವಾಗಿ ಪವರ್ ಕೊಡಲು ಕ್ರಮ ಕೈಗೊಳ್ಳುತ್ತೇವೆ.

ವಿತ್ತೀಯ ಕಾರ್ಯಕಲಾಪಗಳು

ಉಪಾಧ್ಯಕ್ಷರು : ಈಗ 1998-99ನೇ ಸಾಲಿನ ಈ ಕೆಳಕಂಡ ಬೇಡಿಕೆಗಳನ್ನು ಮಂಡಿಸುವುದು:

ಬೇಡಿಕೆ ಸಂ: 28 - ವೈದ್ಯಕೀಯ ಶಿಕ್ಷಣ

ಡಾ|| ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1999 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವೈದ್ಯಕೀಯ ಶಿಕ್ಷಣ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 184,61,47,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು (ಮಂಡಿಸಲು) ಕೋರುತ್ತೇನೆ.

ಬೇಡಿಕೆ ಸಂ: 29-ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಡಾ|| ಹೆಚ್. ಸಿ. ಮಹಾದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಶಿಪಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 623,22,99,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 61,20,00,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು (ಮಂಡಿಸಲು) ಕೋರುತ್ತೇನೆ.

ಬೇಡಿಕೆ ಸಂ: 52 - ಸಹಕಾರ

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ, ಮೇರೆಗೆ 31.3.1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಹಕಾರ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 48,63,43,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 15,21,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು (ಮಂಡಿಸಲು) ಕೋರುತ್ತೇನೆ.